ಸಂಪುಟ : 4 ಸಂಚಿಕೆ : 25 ಪುಟ : 4 ಬೆಲೆ : ರೂ. 4 ಬುಧವಾರ, ಮಾರ್ಚ್, 08, 2023 E-mail: newsbelagavi@gmail.com Mobile No-9900332089

ಬೆಳಗಾವಿ ಮತ್ತು ಬೆಂಗಳೂರಿನಿಂದ ಏಕ ಕಾಲದಲ್ಲಿ ಪ್ರಕಟಿತ



# ಬೆಳಗಾವಿ ವರದಿ

BELAGAVI VARADI KANNADA DAILY

ಕರ್ನಾಟಕ ಕನ್ನಡ ದಿನಪತ್ರಿಕೆ

ಸಂಪಾದಕರು : ಸತೀಶ್.ಬಿ.ಜಿ


Volume : 4 Issue : 25 Pages : 4 Rate : 4 Rs Wednesday, March 08, 2023 RNI : KARKAN/2020/79084 Post Regn.No:G-2/PMG/KA/NK/BM/139/2021-23 belagavivaradi@gmail.com

## ಪವರ್ ಜೊತೆಗೆ ಪವರ್ ಪಾಲಿಟಿಕ್ಸ್ ಬೆರಸಬಾರದು: ಸಿಎಂ ಬೊಮ್ಮಾಯಿ

ಬೆಂಗಳೂರು: ಪವರ್ ಜೊತೆಗೆ ಪವರ್ ಪಾಲಿಟಿಕ್ಸ್ ಬಳಸಬಾರದು. ವಾಸ್ತವ ಅಂಶದ ಮೇಲೆ ಮತ್ತು ಇಲಾಖೆಯ ದಕ್ಷತೆಯ ಹಿತದೃಷ್ಟಿಯಿಂದ ನಾವು ನಿರ್ಣಯಗಳನ್ನು ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಹೇಳಿದರು.

ಸೋಮವಾರ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ ನಿರ್ಮಿಸಿರುವ ಹೊಸ ಕಚೇರಿ ಕಟ್ಟಡಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಅವೈಜ್ಞಾನಿಕ ವಿದ್ಯುತ್ ನೀತಿಗಳಿಂದಾಗಿ ಈಗಾಗಲೇ ಇಂಧನ ಇಲಾಖೆ ನಷ್ಟದಲ್ಲಿದೆ. ಯಾರಿಗೋ ಲಾಭ ಮಾಡುವ ಉದ್ದೇಶದಿಂದ ವಿದ್ಯುತ್ ಇಲಾಖೆಯಲ್ಲಿ ರಾಜಕೀಯ ಪವರ್ ಬಳಸಿರುವುದನ್ನು ನಾವು ನೋಡಿದ್ದೇವೆ. ಇದರ ದುರುಪಯೋಗ ತಡೆಯಲು ನಮ್ಮ ಸರಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಹೇಳಿದರು.

ಒಂದು ಕುಟುಂಬಕ್ಕೆ ಎಷ್ಟು ಮೂಲ ವಿದ್ಯುತ್ ಬೇಕು ಎಂಬುದನ್ನು ಪರಿಶೀಲಿಸಿ ಲೆಕ್ಕ ಹಾಕಿದ್ದೇವೆ. 'ಸಾಮಾನ್ಯವಾಗಿ 50 ರಿಂದ 70 ಯೂನಿಟ್ ಮಾತ್ರ ಗೃಹ ಬಳಕೆಗೆ ಉಪಯೋಗಿಸಲಾಗುತ್ತದೆ. ಸರ್ಕಾರ ಈಗಾಗಲೇ ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ ಯೋಜನೆಯಡಿ ಬಡಜನರಿಗೆ 40 ಯೂನಿಟ್ ಉಚಿತವಾಗಿ ನೀಡುತ್ತಿದೆ. ಹೀಗಾಗಿ, 200 ಯೂನಿಟ್ ಉಚಿತ ವಿದ್ಯುತ್ ಎನ್ನುವುದು ಅರ್ಥಹೀನ' ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.



'ವಿದ್ಯುತ್ ಉತ್ಪಾದನೆ ಜೊತೆಗೆ ಹೆಚ್ಚುವರಿಯಾಗಿ ಉತ್ಪಾದಿಸಿದ ವಿದ್ಯುತ್ ಮಾರಾಟ ಮಾಡಿ ರಾಜ್ಯ ಸರ್ಕಾರ ರೂ.2000 ಕೋಟಿ ವಹಿವಾಟು ನಡೆಸಿದೆ. ಈ ಹಿಂದೆ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಇದನ್ನು ಸ್ಥಳೀಯ ಕಲ್ಲಿದ್ದಲು ಜೊತೆ ಮಿಶ್ರಣ ಮಾಡಲು ಸಾಧ್ಯವಾಗುತ್ತಿರಲಿಲ್ಲ. ದುಬಾರಿ ದರಕ್ಕೆ ಕಲ್ಲಿದ್ದಲು ಖರೀದಿಸಿದ್ದರಿಂದ ನಷ್ಟ ಉಂಟಾಗುತ್ತಿತ್ತು. ಹಾಗೆಯೇ ಕಲ್ಲಿದ್ದಲು ತೊಳೆಯಲು ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಲಾಗುತ್ತಿತ್ತು. ಸ್ಪಷ್ಟ ನೀತಿ ರೂಪಿಸದ ಕಾರಣವೇ ಇಂತಹ ನಿರ್ಧಾರಗಳಿಗೆ ಕಾರಣ' ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರ ರೈತರ ಸೋಲಾರ್ ಪಂಪ್‌ಸೆಟ್‌ಗಳಿಗೆ ಸಹಾಯ ನೀಡುತ್ತಿದೆ. ಸುಗಮ ವಿದ್ಯುತ್ ರವಾನೆಗೆ ಈ ವರ್ಷ ಬಜೆಟ್‌ನಲ್ಲಿ 3000 ಕೋಟಿ ರು.ಗಳನ್ನು ಕೆಪಿಟಿಸಿಎಲ್‌ಗೆ ನೀಡುತ್ತಿದ್ದ?ವೆ. ಕೆಪಿಟಿಸಿಎಲ್ ಉದ್ಯೋ?ಗಿಗಳ ವೇತನ ಪರಿಷ್ಕರಣೆಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರಗಳ ಮೂಲಕ ಉತ್ತಮ ಕೆಲಸಗಳು ಆಗಲಿ ಎಂದು ಸಲಹೆ ನೀಡಿದರು.

ಎಸ್ಕಾಂಗಳಿಗೆ ಸ್ವಾವಲಂಬನೆ ನೀಡಲು ಗುರುಚರಣ್ ಸಮಿತಿ ವರದಿಯ ಶಿಫಾರಸುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಸಮಿತಿಯ ಶಿಫಾರಸುಗಳು ಎಸ್ಕಾಂಗಳು ನಷ್ಟದಿಂದ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಇಂಧನ ಇಲಾಖೆಯಲ್ಲಿನ ಅಧಿಕಾರಿಗಳ ವೇತನ ಶ್ರೇಣಿಯನ್ನು ಸುಧಾರಿಸಲು ಚರ್ಚೆ ನಡೆಸಲಾಗಿದ್ದು, ಶೀಘ್ರದಲ್ಲಿಯೇ ಜಾರಿಗೆ ತರಲಾಗುವುದು. ನವೀಕರಿಸಬಹುದಾದ ಇಂಧನ ಉತ್ಪಾದನೆ ಮತ್ತು ವಿದ್ಯುತ್ ಸಂಗ್ರಹಣೆಯನ್ನು ಸುಧಾರಿಸಲು ಒತ್ತು ನೀಡಲಾಗುತ್ತಿದೆ. ಸರಿಯಾದ ವೈಜ್ಞಾನಿಕ ಲೆಕ್ಕಾಚಾರಗಳ ಮೂಲಕ ವಿತರಣೆ ಮತ್ತು ಉತ್ಪಾದನೆಯ ನಷ್ಟದ ಬಗ್ಗೆ ಅಗತ್ಯ ಪರಿಶೀಲನೆ ನಡೆಸಲಾಗುತ್ತಿದೆ. ವಿದ್ಯುತ್ ಉತ್ಪಾದನೆ ಮತ್ತು ಶೇಖರಣೆಗಾಗಿ ಸೌರ ಬ್ಯಾಟರಿಗಳಿಗೂ ಆದ್ಯತೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.



## ವಿದ್ಯುತ್ ತಂತಿ ಸ್ಪರ್ಶಿಸಿ ಮೂರು ಆನೆಗಳು ಸಾವು

ತಮಿಳುನಾಡು: ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ವಿದ್ಯುತ್ ಬೇಲಿ ದಾಟುತ್ತಿದ್ದಾಗ ವಿದ್ಯುತ್ ಸ್ಪರ್ಶದಿಂದ ಮೂರು ಆನೆಗಳು ಸಾವನ್ನಪ್ಪಿವೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಮಾರಂಡಹಳ್ಳಿಯಲ್ಲಿ ಸೋಮವಾರ ಈ ಘಟನೆ ನಡೆದಿದೆ. ಘಟನೆಯ ನಂತರ, ಕಾನೂನು ಬಾಹಿರ ಬೇಲಿ ಬಳಸಿದ್ದಕ್ಕಾಗಿ ಮುರುಗೇಶನ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಕಾಡು ಪ್ರಾಣಿಗಳಿಂದ ಬೆಳೆಗಳನ್ನು ರಕ್ಷಿಸಲು ಬೇಲಿ ಹಾಕಲಾಗಿದೆ ಎಂದು ಆರೋಪಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ.

## ಮಹಿಳಾ ದಿನಾಚರಣೆ: ಇಂದು ಬಿಎಂಟಿಸಿ ಬಸ್ ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ



ಬೆಂಗಳೂರು: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರ ರಾಜಧಾನಿ ಬೆಂಗಳೂರಿನ ಮಹಿಳೆಯರಿಗೆ ಸಿಹಿ ಸುದ್ದಿ ನೀಡಿದ್ದು, ಬಿಎಂಟಿಸಿ ಬಸ್ ಗಳಲ್ಲಿ ಮಹಿಳೆಯರು ಎಲ್ಲಿಂದ ಎಲ್ಲಿಗೆ ಬೇಕಾದರೂ ಉಚಿತವಾಗಿ ಪ್ರಯಾಣಿಸಬಹುದು.

ಮಾರ್ಚ್ 7ರ ಮಧ್ಯರಾತ್ರಿ 12 ಗಂಟೆಯಿಂದ ಮಾರ್ಚ್ 8ರ ಮಧ್ಯರಾತ್ರಿ 12 ಗಂಟೆ ರವರೆಗೆ ಮಹಿಳಾ ಪ್ರಯಾಣಿಕರು ಉಚಿತವಾಗಿ ಬಿಬಿಎಂಟಿಸಿ ಬಸ್ಗಳಲ್ಲಿ ಪ್ರಯಾಣಿಸಬಹುದು. ವೋಲ್ವೋ, ಎಸಿ ಬಸ್, ವಾಯುವ್ಯ ರಸ್ತೆ ಸಾರಿಗೆ, ಏರ್ಪೋರ್ಟ್ ಬಸ್ ಸೇರಿದಂತೆ ಬಿಎಂಟಿಸಿಯ ಎಲ್ಲ ಮಾದರಿಯ ಬಸ್ನಲ್ಲಿ ಉಚಿತವಾಗಿ ನಾಳೆ ಒಂದು ದಿನ ಮಹಿಳೆಯರು ಪ್ರಯಾಣಿಸಲು ಅವಕಾಶ ಕಲ್ಪಿಸಿದೆ.

ಮಹಿಳೆಯರು ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಯಾವುದೇ ದಾಖಲಾತಿ, ಗುರುತಿನ ಚೀಟಿಯ ಅವಶ್ಯಕತೆ ಇಲ್ಲ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಬಿಎಂಟಿಸಿ ವ್ಯಸ್ಥಾಪಕ ನಿರ್ದೇಶಕಿ ಸತ್ಯವತಿ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದರಂತೆ ಸರ್ಕಾರವು ಒಪ್ಪಿಗೆ ನೀಡಿದ್ದು, ಮಹಿಳೆಯರಿಗೆ ಒಂದು ದಿನದ ಮಟ್ಟಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ.

## ಸಿಎಂ ಬೊಮ್ಮಾಯಿಗೆ ನೈತಿಕತೆಯಿದ್ದರೆ ರಾಜೀನಾಮೆ ನೀಡಲಿ: ಸಿದ್ದರಾಮಯ್ಯ



ಬೆಂಗಳೂರು: ಬಿಜೆಪಿ ಶಾಸಕ ಯಡಿಯೂರಪ್ಪ ಆಪ್ತ ಮಾಡಾಳ್ ವಿರೂಪಾಕ್ಷಪ್ಪ ಮಗನ ಮನೆಯಲ್ಲಿ 8 ಕೋಟಿ ಸಿಕ್ಕಿದೆ. ಹಾಗಾದರೆ ಎಷ್ಟು ಪ್ರಮಾಣದಲ್ಲಿ ಲಂಚ ಹೊಡೆದಿರಬಹುದು. ಇವಾಗ 40% ಕಮಿಷನ್ ಸಾಬೀತು ಆಗಿದೆ. ಸಿಎಂ ಬೊಮ್ಮಾಯಿಗೆ ನೈತಿಕತೆ ಇದ್ದರೆ ಕೂಡಲೇ ರಾಜೀನಾಮೆ ನೀಡಿ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ಇದು 40% ಕಮಿಷನ್ ಸರ್ಕಾರ ಎಂದು ಸಾಬೀತಾಗಿದೆ. ಇನ್ನೇನು ದಾಖಲೆಗಳು ಬೇಕು ಎಂದು ಪ್ರಶ್ನಿಸಿದರು. ಮಾಡಾಳ್ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಅವರನ್ನು ಕೂಡಲೇ ಬಂಧನ ಮಾಡಬೇಕು. ಅವರು ಬೆಂಗಳೂರಿನಲ್ಲೇ ಇದ್ದಾರೆ ಎಂದು ಹೇಳಿದರು.

ಭ್ರಷ್ಟಾಚಾರದ ದಾಖಲೆ ಸಿಎಂ ಬೊಮ್ಮಾಯಿ ಕೇಳ್ತಿದ್ದಾರೆ. ಜನರಿಗೆ ತಪ್ಪು ಮಾಹಿತಿ ಕೊಡುತ್ತಿದ್ದಾ-ರೆ. ಭ್ರಷ್ಟಾಚಾರ ರಕ್ಷಣೆಗೆ ಎಸಿಬಿ ರಚನೆ ಮಾಡಿದ್ರು ಎನ್ನುತ್ತಾರೆ. ಕನಿಷ್ಠ ಕಾನೂನು ಜ್ಞಾನ ಇದ್ದವರು ಹೀಗೆ ಮಾತನಾಡಲ್ಲ. ನಾವು ಲೋಕಾಯುಕ್ತ ಮುಚ್ಚುವ ಕೆಲಸ ಮಾಡಿಲ್ಲ. ಲೋಕಾಯುಕ್ತದಲ್ಲಿ ಭ್ರಷ್ಟಾಚಾರ ನಡೆದ ಕಾರಣ ಎಸಿಬಿ ರಚನೆ ಮಾಡಿದ್ದೆವು. ಎಸಿಬಿ ರದ್ದು ಮಾಡುವುದಾಗಿ ಪ್ರಣಾಳಿಕೆಯಲ್ಲಿ ಹೇಳಿದ್ದರು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದಾಗ ರದ್ದು ಮಾಡಿಲ್ಲ. ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯದಲ್ಲಿ ಎಸಿಬಿ ಲೋಕಾಯುಕ್ತ ಇದೆ. ಅಲ್ಲಿ ಏಕೆ ಎಸಿಬಿ ರದ್ದು ಮಾಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಮೇಲ್ಜಾತಿಯವರ ಪಕ್ಷ ಶ್ರೀಮಂತ ವರ್ಗದವರ ಪಕ್ಷ. ಕೆಳ ವರ್ಗದವರ ಬಗ್ಗೆ ನಾಡಿನ ಅಭಿವೃದ್ಧಿ ಬಗ್ಗೆ ಬಿಜೆಪಿ ಚಿಂತನೆ ಮಾಡಲ್ಲ. ದಲಿತರು ಬಿಜೆಪಿ ಕಡೆ ತಿರುಗಿಯೂ ನೋಡಬಾರದು. ತಳ ಸಮುಯದಾಯದವರು ಬಿಜೆಪಿಯವರನ್ನು ತಲೆ ಎತ್ತಿಯೂ ನೋಡಬಾರದು. ಬಿಜೆಪಿಯವರು ಮನುವಾದಿಗಳು. ಸ್ವಾಮಿ ವಿವೇಕಾನಂದ ಹೇಳಿದ್ದಾರೆ ಮನುವಾದಿಗಳು ಹಾಗೂ ಪುರೋಹಿತ ಶಾಹಿ ವ್ಯವಸ್ಥೆ ಈ ದೇಶಕ್ಕೆ ಶಾಪ ಎಂದಿದ್ದಾರೆ. ನೀವೆಲ್ಲಾ ಬಿಜೆಪಿ ಬಿಟ್ಟು ಒಳ್ಳೆ ಕೆಲಸ ಮಾಡಿದ್ದೀರಿ ಎಂದರು.

ಪಕ್ಷ ಸೇರ್ಪಡೆ ಆದ ಮೂವರು ದಲಿತ ಸಮುದಾಯದವರು ನೀವು ಬಿಜೆಪಿ ಬಿಟ್ಟು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳುತ್ತಾ ಪಕ್ಷದ ಬಾವುಟ ನೀಡುವ ಮೂಲಕ ಇಬ್ಬರು ಮಾಜಿ ಶಾಸಕರು ಹಾಗೂ ಮಾಜಿ ಮೇಯರನ್ನು ಕಾಂಗ್ರೆಸ್ ನಾಯಕರು ಇಂದು ಪಕ್ಷಕ್ಕೆ ಬರಮಾಡಿಕೊಂಡರು.

## ಬಿಜೆಪಿ ನಾಲ್ಕೈದು ಶಾಸಕರಿಗೆ ಟಿಕೆಟ್ ಇಲ್ಲ: ಬಿ.ಎಸ್. ಯಡಿಯೂರಪ್ಪ




ಕಲಬುರಗಿ: ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಟಿಕೆಟ್ ಕುರಿತು ಕೊಟ್ಟ ಸುಳಿವಿನಿಂದ ಆಕಾಂಕ್ಷಿಗಳಿಗೆ ಶಾಕ್ ಆಗಿದೆ. ನಾಲ್ಕೈದು ಶಾಸಕರಿಗೆ ಟಿಕೆಟ್ ಇಲ್ಲ ಎಂದು ಬಿಎಸ್ವೈ ಹೇಳಿದ್ದು, ಇದೀಗ ಬಿಜೆಪಿಯ ಆ ಟಿಕೆಟ್ ವಂಚಿತರು ಯಾರು ಎಂಬ ಪ್ರಶ್ನೆ ಕಾಡಿದೆ.

ಕಲಬುರಗಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಮಾಜಿ ಸಿಎಂ, ಬಿಜೆಪಿ ಪಕ್ಷಕ್ಕೆ ಯಾರು ಬರುತ್ತಾರೆ ಅವರಿಗೆ ಸ್ವಾಗತ. ಯಾರು ಪಕ್ಷ ಬಿಟ್ಟು ಹೋಗ್ತಾರೆ ಅವರು ಬಿಟ್ಟು ಹೋಗಬಹುದು. ನಾಲ್ಕೈದು ಹಾಲಿ ಶಾಸಕರನ್ನು ಬಿಟ್ಟು ಉಳಿದ ಎಲ್ಲಾ ಬಿಜೆಪಿ ಶಾಸಕರಿಗೆ ಟಿಕೆಟ್ ಕೊಡಲಾಗುವುದು. ಆದಷ್ಟು ಬೇಗ ಬಿಜೆಪಿ ಹುರಿಯಾಳುಗಳ ಪಟ್ಟಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ದಾವಣಗೆರೆಯಲ್ಲಿ ವಿಜಯಸಂಕಲ್ಪ ಯಾತ್ರೆ ಸಮಾರೋಪ ಸಮಾರಂಭ ನಡೆಯಲಿದೆ. ನರೇಂದ್ರ ಮೋದಿ ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಬಸವಕಲ್ಯಾಣ ಇಡೀ ದೇಶ ಗಮನ ಸೇಳೆಯುವ ಸ್ಥಳ ಆಗಬೇಕು ಎನ್ನುವುದು ನಮ್ಮ ಅಪೇಕ್ಷೆ. ಕಲ್ಯಾಣ ಕರ್ನಾಟಕ ದಲ್ಲಿ ಪ್ರತ್ಯೇಕ ಸಚಿವಾಲಯದ ಬಗ್ಗೆ ಚರ್ಚೆ ಮಾಡುವೆ ಎಂದು ಹೇಳಿದರು.

ಇದೇ ವೇಳೆ 2023ರ ವಿಧಾನಸಭೆಗೆ ವಿಜಯೇಂದ್ರ ಸ್ಪರ್ಧೆ ವಿಚಾರದ ಕುರಿತು ಮಾತನಾಡಿ, ಕೇಂದ್ರದ ನಾಯಕರು ಎಲ್ಲಿ ಹೇಳುತ್ತಾರೆ ಅಲ್ಲಿ ವಿಜಯೇಂದ್ರ ಸ್ಪರ್ಧೆ ಮಾಡುತ್ತಾರೆ. ಶಿಕಾರಿಪುರ ಆಗಬಹುದು ಬೇರೆ ಯಾವುದು ಆಗಬಹುದು, ಶಿಕಾರಿಪುರದಲ್ಲಿ ನಿಲ್ಲಬಹುದು ಅಂತಾ ನನ್ನ ಅನಿಸಿಕೆ ಎಂದರು.

## ಮಕ್ಕಳಾಗದ ಕಾರಣ ರಾಹುಲ್ ಗಾಂಧಿ ಮದುವೆಯಾಗುತ್ತಿಲ್ಲ: ಕಟೀಲ್ ಹೇಳಿಕೆಗೆ ನಟ ಚೇತನ್ ಆಕ್ಷೇಪ



ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆ ಸನ್ನಿಹದಲ್ಲಿರುವಂತೆಯೇ, ಕೆಲ ರಾಜಕೀಯ ಪಕ್ಷಗಳ ನಾಯಕರು ನೀಡುವ ಹೇಳಿಕೆ ವಿವಾದ ಹಾಗೂ ಆಕ್ಷೇಪಕ್ಕೆ ಎಡೆ ಮಾಡಿಕೊಡುತ್ತಿದೆ.

ರಾಹುಲ್ ಗಾಂಧಿ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೀಡಿರುವ ಹೇಳಿಕೆ ಕೂಡಾ ಸಾರ್ವಜನಿಕ ವಲಯದಲ್ಲಿ ಟೀಕೆಗೆ ಗು-ರಿಯಾಗಿದೆ.

ಸಾಗರದಲ್ಲಿ ಸೋಮವಾರ ಮಾತನಾಡಿದ್ದ ಕಟೀಲ್ , ಕೊರೊನಾ ಲಸಿಕೆ ಹಾಕಿಸಿಕೊಂಡರೆ ಮಕ್ಕಳಾಗುವುದಿಲ್ಲ ಎಂದು ಸಿದ್ದರಾಮಯ್ಯ ಜನರಿಗೆ ತಪ್ಪು ಮಾಹಿತಿ ನೀಡಿದ್ದರು. ಆದರೂ, ಕಾಂಗ್ರೆಸ್ ನಾಯಕರು ಕೊರೊನಾ ಹೆದರಿ ಲಸಿಕೆ ಹಾಕಿಸಿಕೊಂಡರು. ಲಸಿಕೆ ಪಡೆದರೆ ಮಕ್ಕಳಾಗುವುದಿಲ್ಲ ಎಂಬ ಸಿದ್ದರಾಮಯ್ಯ ಮಾತು ಕೇಳಿ ರಾಹುಲ್ ಗಾಂಧಿ ಮದುವೆ ಆಗುತ್ತಿಲ್ಲ ಎಂದು ವ್ಯಂಗ್ಯ ವಾಡಿದ್ದರು.

ಮಕ್ಕಳಾಗದ ಕಾರಣ ರಾಹುಲ್ ಗಾಂಧಿ ಮದುವೆಯಾಗುತ್ತಿಲ್ಲ ಎಂಬ ನಳಿನ್ ಕುಮಾರ್ ಕಟೀಲ್ ಅವರ ಹೇಳಿಕೆಗೆ ನಟ ಚೇತನ್ ಅಹಿಂಸಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ನಟ ಚೇತನ್, ಮಕ್ಕಳಾಗದ ಕಾರಣ ರಾಹುಲ್ ಗಾಂಧಿ ಮದುವೆಯಾಗುತ್ತಿಲ್ಲ ಎಂದು ಬಿಜೆಪಿ ಸಂಸದ ಕಟೀಲ್ ಹೇಳಿಕೆ ನೀಡಿದ್ದಾರೆ. ಇದು ಅತ್ಯಂತ ಕೆಳಮಟ್ಟದ್ದು ಮತ್ತು ತಾರ್ಕಿಕವಾಗಿ ದೋಷಪೂರಿತ ಹೇಳಿಕೆ ಎಂದಿದ್ದಾರೆ. ರಾಹುಲ್ ಗಾಂಧಿ ಅವರು ಪುರುಷನಿಗಿಂತ ಕಡಿಮೆ ಎಂದು ಬಿಂಬಿಸುವ ಪುರುಷ ಪ್ರಧಾನದ ಪ್ರಚೋದನೆಯು ಹಿಮ್ಮೆಟಿಸುವಿಕೆ ಮತ್ತು ಅನುಚಿತವಾಗಿದೆ ಎಂದು ಹೇಳಿದ್ದಾರೆ.

ಎರಡನೇಯದಾಗಿ ಮಕ್ಕಳನ್ನು ಹೊಂದಲೆಂದೇ ಮದುವೆಯಾಗಬೇಕೇ ಎಂದು ನಳೀನ್ ಕುಮಾರ್ ಕಟೀಲ್ ಅವರನ್ನು ಚೇತನ್ ಪ್ರಶ್ನಿಸಿದ್ದಾರೆ.

## ಗೊಂದಲಗಳಿಗೆ ತೆರೆ ಎಳೆದ ಫಾಕ್ಸ್‌ಕಾನ್

ಬೆಂಗಳೂರು: ಕರ್ನಾಟಕದಲ್ಲಿ ಐಫೋನ್ ಉತ್ಪಾದನಾ ಘಟಕವನ್ನು ಸ್ಥಾಪಿಸಿ ಒಂದು ಲಕ್ಷ ಉದ್ಯೋಗ ಸೃಷ್ಟಿಯಾಗುವ ವಿಚಾರ ಸಂಬಂಧ ಎದ್ದಿದ್ದ ಗೊಂದಲಗಳಿಗೆ ಫಾಕ್ಸ್‌ಕಾನ್ ತೆರೆ ಎಳೆದಿದೆ.

ಕರ್ನಾಟಕದೊಂದಿಗೆ ಕೆಲಸ ಮಾಡಲು ಸಿದ್ಧರಿದ್ದೇವೆ ಎಂದು ಫಾಕ್ಸ್‌ಕಾನ್ ಹೇಳಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಪತ್ರವೊಂದನ್ನು ಬರೆದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎರಡು ಪುಟಗಳ ಪತ್ರ ಬರೆದಿರುವ ಫಾಕ್ಸ್‌ಕಾನ್ ಅಧ್ಯಕ್ಷ ಯಂಗ್ ಲಿಯು, ಬೆಂಗಳೂರಿನಲ್ಲಿ 'ಪ್ರಾಜೆಕ್ಟ್ ಎಲಿಫೆಂಟ್' ಅನ್ನು ಯಶಸ್ವಿಯಾಗಿ ಆರಂಭಿಸುವುದಾಗಿ ಹೇಳಿದ್ದಾರೆ. ಈ ಮೂಲಕ ಒಪ್ಪಂದದ ಬಗೆಗಿನ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಈ ಯೋಜನೆಗೆ ನಿಮ್ಮ ರಾಜ್ಯವನ್ನು ಸಂಭಾವ್ಯ ಹೂಡಿಕೆಯ ತಾಣವಾಗಿ ಪರಿಗಣಿಸುವುದರಿಂದ, ಯಾಂತ್ರಿಕ/ನಿಖರವಾದ ಯಂತ್ರೋಪಕರಣಗಳು, ಕೆ ಎಲೆಕ್ಟ್ರಿಕ್ ವಾಹನ, ಐಸಿ ವಿನ್ಯಾಸ ಮತ್ತು ಸೆಮಿಕಂಡಕ್ಟರ್ ವಿಭಾಗಗಳನ್ನು ವ್ಯಾಪಿಸಿರುವ ನಮ್ಮ ಇತರ ಬಹು ಯೋಜನೆಗಳಿಗೆ ಬಲವಾದ ಅಡಿಪಾಯ ಸಿಗುತ್ತದೆ ಎಂಬ ವಿಶ್ವಾಸ ನನಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

## ಖರ್ಗೆ, ಪರಮೇಶ್ವರ್ , ನನ್ನನ್ನು ಸೋಲಿಸಲು ಸಿದ್ದು ಪ್ರಯತ್ನಿಸಿರಲಿಲ್ಲ: ಮುನಿಯಪ್ಪ



ಕೋಲಾರ: ನನ್ನನ್ನೂ ಸೇರಿ ಮಲ್ಲಿಕಾರ್ಜುನ ಖರ್ಗೆ, ಡಾ। ಜಿ.ಪರಮೇಶ್ವರ್ ಮತ್ತಿತರರ ಯಾರನ್ನೂ ಕಳೆದ ಚುನಾವಣೆಗಳಲ್ಲಿ ಸೋಲಿಸಲು ಮಾಜಿ ಸಿಎಂ ಸಿದ್ದರಾಮಯ್ಯ ಮುಂದಾಗಿರಲಿಲ್ಲ. ಅಂತಹ ವದಂತಿಗಳಿಗೆ ಕಿವಿಗೊಡಬೇಕಾಗಿಲ್ಲ ಎಂದು ಮಾಜಿ ಸಂಸದ ಕೆ.ಎಚ್.ಮುನಿಯಪ್ಪ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವಧಿಯಲ್ಲಿ ನನಗೆ ಬಹಳಷ್ಟು ಕೆಲಸವಾಗಿದೆ. ಯಾವುದೇ ವಿಚಾರಕ್ಕೆ ಹೋದರೂ ಅವರು ನನಗೆ ಸ್ಪಂದಿಸುತ್ತಿದ್ದರು. ಈಗಲೂ ನಾನು ಅವರ ಪರವಾಗಿ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮನ್ನು ಸೋಲಿಸಿದ್ದಾರೆ ಎನ್ನುವುದು ಸುಳ್ಳಿನ ಸಂಗತಿ ಎಂದು ಹೇಳಿದರು.

ರಾಜ್ಯದ ಮೊಟ್ಟಮೊದಲ ಮುಖ್ಯಮಂತ್ರಿ ಕೋಲಾರ ಜಿಲ್ಲೆಯವರಾಗಿದ್ದು, ಎರಡನೇ ಬಾರಿ ಕೋಲಾರ ಜಿಲ್ಲೆಗೆ ಮುಖ್ಯಮಂತ್ರಿ ಆಗುವ ಅವಕಾಶ ಬಂದಿದೆ. ಈ ನಿಟ್ಟಿನಲ್ಲಿ ಕೋಲಾರದಲ್ಲಿ ಗೆಲ್ಲಿಸಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಿ ಶ್ರಮಿಸುತ್ತೇವೆ. ಮಾಜಿ ಮುಖ್ಯಮಂತ್ರಿಯನ್ನು ಇಲ್ಲಿ ಗೆಲ್ಲಿಸಿಕೊಳ್ಳಲಾಗಿಲ್ಲವೆಂದರೆ ನಾವು ಇನ್ನೇನು ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು.

## ನಿವೃತ್ತ ಪೊಲೀಸ್ ಶವವಾಗಿ ಪತ್ತೆ



ಬೆಂಗಳೂರು: ದೇವರ ದರ್ಶನಕ್ಕೆ ತೆರಳುವುದಾಗಿ ಹೊರಟ ವ್ಯಕ್ತಿ ಶವವಾಗಿ ಪತ್ತೆಯಾದ ಘಟನೆ ಮೆಜೆಸ್ಟಿಕ್‌ನ ಕೆಎಸ್‌ಆರ್ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ದೊಡ್ಡಬಳ್ಳಾಪುರದ ಮದುರನ ಹೊಸಹಳ್ಳಿ ನಿವಾಸಿ, ನಿವೃತ್ತ ಪೊಲೀಸ್ ಸಿಬ್ಬಂದಿ ಮುನಿ ಆಂಜನೇಯ ಮೃತ ವ್ಯಕ್ತಿ. ಗೆಳೆಯರ ಜೊತೆ ಧರ್ಮಸ್ಥಳಕ್ಕೆ ತೆರಳುವುದಾಗಿ ಮುನಿ ಆಂಜನೇಯ ಸೋಮವಾರ 2 ಗಂಟೆಗೆ ಮನೆಯಿಂದ ಹೊರಟಿದ್ದರು. ಬಳಿಕ ಮೆಜೆಸ್ಟಿಕ್‌ನ ಕೆಎಸ್‌ಆರ್ಟಿಸಿ ಬಸ್ ನಿಲ್ದಾಣದಲ್ಲಿ ಗೆಳೆಯರಿಗಾಗಿ ಕಾದು ಕುಳಿತಿದ್ದಾಗ ಸಂಶಯಾಸ್ಪದವಾಗಿ ಸಾವನ್ನಪ್ಪಿದ್ದಾರೆ. ಬೆಳಗಿನ ಜಾವ 3 ಗಂಟೆ ಸುಮಾರಿಗೆ ಶವ ಪತ್ತೆಯಾಗಿದೆ.

ಮೃತರ ಬಳಿ ಇದ್ದ ಚಿನ್ನಾಭರಣ ಹಾಗೂ ಕ್ಯಾಶ್ ನಾಪತ್ತೆಯಾಗಿದ್ದು, ಸಾವಿನ ಹಿಂದೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಸದ್ಯ ಇವರ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಕುರಿತು ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪಂಚಮಸಾಲಿ ಹೋರಾಟಕ್ಕೆ ಸಂಪೂರ್ಣ ಬೆಂಬಲ: ಸತೀಶ ಜಾರಕಿಹೊಳಿ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಭರವಸೆ ನೀಡಿದರು.

ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ನಡೆಯುತ್ತಿರುವ ಪಂಚಮಸಾಲಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಅವರು ಮಾತನಾಡಿದರು. ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಕೂಡಲಸಂಗಮ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರು ಈ ಹಿಂದೆ ಪಾದಯಾತ್ರೆ ಮಾಡಿದ್ದಾರೆ. ಸುವರ್ಣಸೌಧ, ಬೆಂಗಳೂರಿನ ವಿಧಾನಸೌಧದವರೆಗೂ ಪಾದಯಾತ್ರೆ



ಮಾಡಿದ್ದಾರೆ. ಆದರೆ, ಸರ್ಕಾರ ಮೀಸಲಾತಿ ನೀಡುತ್ತಿಲ್ಲ. ಹಾಗಾಗಿ, ಸಮಾಜಕ್ಕೆ ಅನ್ಯಾಯವಾಗಿದೆ ಎಂದರು.

ಲಿಂಗಾಯತ ಸಮಾಜವನ್ನು ಮತಬ್ಯಾಂಕ್ ಆಗಿ ಮಾಡಿಕೊಳ್ಳುತ್ತಾರೆ. ಇದನ್ನು ನಾವು ತಿಳಿದುಕೊಳ್ಳಬೇಕಿದೆ. ಬೇರೆ ಸಮುದಾಯದವರೇ ಮುಖ್ಯಮಂತ್ರಿಯಾಗುತ್ತಿದ್ದಾರೆ.

ಪಂಚಮಸಾಲಿ ಸಮುದಾಯದವರು ಮುಖ್ಯಮಂತ್ರಿ ಆಗಲು ಸಾಧ್ಯವಾಗಿಲ್ಲ. ಮಠಾಧೀಶರ ಮೂಲಕ ನಾವು ಸಮಾಜದಲ್ಲಿ ಬದಲಾವಣೆ ಕಾಣಿದ್ದೇವೆ. ಪಂಚಮಸಾಲಿ ಮೀಸಲಾತಿ ಹೋರಾಟ ಸಂಬಂಧ ಕಾಂಗ್ರೆಸ್ ಪಕ್ಷದ ಸ್ಪಷ್ಟ ನಿಲುವು ಬರಬೇಕಿದೆ. ನಾನು ನುಡಿದಂತೆ ನಡೆಯಬೇಕಾಗುತ್ತದೆ. ಈ ಕುರಿತು ಪಕ್ಷದ ಮುಖಂಡರ ಜೊತೆಗೆ ಚರ್ಚೆ ಮಾಡುತ್ತೇನೆ ಎಂದರು.

ಈ ಹಿಂದೆ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವಂತೆ ಮೊಟ್ಟ ಮೊದಲ ಬಾರಿಗೆ ನಾನೇ ಮುಖ್ಯಮಂತ್ರಿಗೆ ಪತ್ರ ಬರೆದಿದ್ದೆ ಎಂದು ಹೇಳಿದರು.

4–5 ಕೋಟಿ ರೂಪಾಯಿ ವೆಚ್ಚ ಮಾಡಿ ಆಸ್ಪತ್ರೆ ಕಟ್ಟಿದರೂ ವೈದ್ಯರಿಲ್ಲ. 5 ಸಾವಿರ ಶಾಲೆ ವಿಲಿನಿಕರಣ ಮಾಡಿದ್ದಾರೆ. ಖಾಸಗಿ ಶಾಲೆಗೆ ಹಚ್ಚಲು ಬಡವರ ಬಳಿ ದುಡ್ಡಿಲ್ಲ. ದಿಲ್ಲಿ ಮಾದರಿ ಶಿಕ್ಷಣ ಜಾರಿಗೊಳಿಸಲಾಗುವುದು.

ಹೆಚ್ಚು ಶಾಲೆಗಳನ್ನು ಆರಂಭಿಸಲಾಗುವುದು. ಬೇರೆಯದ್ದಕ್ಕೆಲ್ಲ ದುಡ್ಡು ಖರ್ಚು ಮಾಡುತ್ತೇವೆ. ಶಿಕ್ಷಣ, ವೈದ್ಯಕೀಯಕ್ಕೆ ಖರ್ಚು ಮಾಡುವುದಿಲ್ಲ. ಸರ್ಕಾರ ಮನ ಸ್ಥಿತಿ ಬದಲಾಗಬೇಕಿದೆ. ಕಲ್ಯಾಣ ರಾಜ್ಯ ಕನಸು ನನಸಾಗುವ ಕಾಲ ಬರುತ್ತದೆ. ಬೆಂಗಳೂರಿನ ಶಿಕ್ಷಣ ಗ್ರಾಮೀಣ ಭಾಗದಲ್ಲೂ ಸಿಗಬೇಕು.

ಗ್ರಾಮೀಣ ಭಾಗಕ್ಕೂ ಆದ್ಯತೆ ನೀಡಬೇಕು. ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುತ್ತವೆ. ಹಾಗಾಗಿ, ಮಕ್ಕಳನ್ನು ಸುರಿಯುತ್ತಿರುವ ಮಳೆಯಲ್ಲೇ ಹೊರಗೆ ಪಾಠ ಮಾಡಲಾಗುತ್ತಿದೆ ಎಂದು ಅವರು ವಿಷಾದಿಸಿದರು. ಇದೇ ಸಂದರ್ಭದಲ್ಲಿ ಸತೀಶ ಜಾರಕಿಹೊಳಿ ಅವರನ್ನು ಕೂಡಲಸಂಗಮ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸನ್ಮಾನಿಸಿದರು.

## ತಾಯಿ, ಇಬ್ಬರು ಮಕ್ಕಳು ಮನೆಯಲ್ಲೇ ಸಜೀವ ದಹನ



ರಾಯಚೂರು: ಬೆಂಕಿ ಅವಘಡದಿಂದಾಗಿ ಮನೆಯಲ್ಲಿದ್ದ ತಾಯಿ ಹಾಗೂ ಇಬ್ಬರು ಮಕ್ಕಳು ಸಜೀವ ದಹನವಾಗಿರುವ ಹೃದಯ ವಿದ್ರಾವಕ ಘಟನೆ ರಾಯಚೂರು ಜಿಲ್ಲೆಯ ಶಕ್ತಿನಗರದಲ್ಲಿ ನಡೆದಿದೆ.

ಶಕ್ತಿನಗರದ ಕೆಪಿಸಿ ಕ್ವಾಟ್ರಸ್‌ನಲ್ಲಿ ಈ ಘಟನೆ ನಡೆದಿದ್ದು, ಮೃತರನ್ನು ಮಂಡ್ಯ ಮೂಲದ ರಂಜಿತಾ(33), ಮಕ್ಕಳಾದ ಮೃದಲ(13), ತಾರುಣ್ಯ(5) ಎಂದು ಗುರುತಿಸಲಾಗಿದೆ. ಮನೆಯಲ್ಲಿ ಅಳವಡಿಸಿದ್ದ ಎಸಿ ಸ್ಫೋಟದಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಆದ್ರೆ ಘಟನೆಗೆ ಇನ್ನೂ ಸ್ಪಷ್ಟವಾದ ಕಾರಣ ತಿಳಿದುಬಂದಿಲ್ಲ.

ಮೃತ ರಂಜಿತಾ ಪತಿ ಸಿದ್ದಲಿಂಗಯ್ಯ ಸ್ವಾಮಿ ಆರ್ಟಿಪಿಎಸ್‌ನಲ್ಲಿ ಎಇಇ ಆಗಿ ಕೆಲಸ ಮಾಡುತ್ತಿದ್ದಾರೆ. ಇವರು ಕೆಲಸಕ್ಕೆ ತೆರಳಿದ್ದ ವೇಳೆ ಮನೆಯಲ್ಲಿ ಅವಘಡ ನಡೆದಿದೆ. ಶಕ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಮೃತರ ಸಂಬಂಧಿಕರ ಹೇಳಿಕೆ ಪಡೆದ ಬಳಿಕ ಪ್ರಕರಣ ದಾಖಲಿಸಲು ಪೊಲೀಸರು ಕಾಯುತ್ತಿದ್ದು, ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಶವಾಗಾರಕ್ಕೆ ರವಾನಿಸಲಾಗಿದೆ.

# ಡಾ ಬಿ ಆರ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ನಾಮಫಲಕ ಉದ್ಘಾಟನೆ






ಶಿಡ್ಲಘಟ್ಟ : ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಚೀಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಹೆಣ್ಣೂರು ಗ್ರಾಮದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಡಾ ಬಿ ಆರ್ ಅಂಬೇಡ್ಕರ್ ಹಾಗೂ ಜಗಜೀವನ್ ರಾಮ್ ನಾಮಫಲಕ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಯಣ್ಣೂರು ಗ್ರಾಮದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಯುವಕರ ಸಂಘ ಹಾಗೂ ಡಾ. ಬಿ.ಆರ್ ಅಂಬೇಡ್ಕರ್ ಹಾಗೂ ಜಗಜೀವನ್ ರಾವ್ ನಾಮಫಲಕ ಗಣ್ಯರಿಂದ ಉದ್ಘಾಟನೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಸೋರಪಲ್ಲಿ ಚಂದ್ರಶೇಖರ್ ಬೇವು ಬೆವರು ತಂಡದವರು ಭಾಗವಹಿಸಿ ಡಾ ಬಿ ಆರ್ ಅಂಬೇಡ್ಕರ್ ಅವರ ಹಾಡುಗಳನ್ನು ಹಾಡಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ರಾಮಾಂಜಿನಪ್ಪ ರವರು ಮಾತನಾಡಿ, ಡಾ ಬಿ ಆರ್ ಅಂಬೇಡ್ಕರ್ ರವರ ಜೀವನದ ಬಗ್ಗೆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಶಾಲೆಯಲ್ಲಿ ಬೋರ್ಡಿನ ಮೇಲೆ ಶಿಕ್ಷಕ ಲೆಕ್ಕ ಬರೆಯುತ್ತಾರೆ.

ಈ ಲೆಕ್ಕವನ್ನು ಯಾರಾದರೂ ಬಿಡಿಸುತ್ತೀರಾ ಎಂದು ಕೇಳಿದಾಗ ಯಾರು ಬಿಡಿಸುವುದಕ್ಕೆ ಒಪ್ಪುವುದಿಲ್ಲ ಹಾಗ ಮೂಲೆಯಲ್ಲಿ ಕೂತಿರುವಂತಹ ಅಂಬೇಡ್ಕರ್ ಆ ಲೆಕ್ಕವನ್ನು ಬಿಡಿಸುವುದಕ್ಕೆ ಹೋದಾಗ ಉಳಿದಂತಹ ಮಕ್ಕಳು ಅಸಹ್ಯ ಪಡುತ್ತಾರೆ ದಲಿತ ಹುಡುಗ ಬೋರ್ಡ್ ಮುಟ್ಟಿದರೆ ಮೈಲಿಗೆ ಆಗುತ್ತೆ ಅಂತ ಅವರ ಮೇಲೆ ಬಹಳಷ್ಟು ಗಲಾಟೆ ಮಾಡುತ್ತಾರೆ ಆದರೂ ಸಹಿತ ಶಿಕ್ಷಕ ಅಂಬೇಡ್ಕರ್ ರವರಿಗೆ ಅನುಕೂಲ ಮಾಡಿಕೊಡುತ್ತಾರೆ ಅಂಬೇಡ್ಕರ್ ಅವರ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿನಿ ರೇಣುಕಾ ರವರು ಮಾತನಾಡಿ, ಡಾ ಬಿ ಆರ್ ಅಂಬೇಡ್ಕರ್ ರವರು ನಿಮ್ಮನ್ನು ಬಿಟ್ಟುಕೊಳ್ಳದಿರುವಂತಹ ದೇವಾಲಯಗಳಿಗೆ ಹೋಗಿ ಗುಲಾಮರಾಗುವ ಬದಲು ಗ್ರಂಥಾಲಯಗಳಿಗೆ ಹೋಗಿ ವಿದ್ಯಾವಂತರಾಗಿ ಹಾಗೂ ನೀವು ಬದುಕಿದರೆ ಹುಲಿ ಸಿಂಹಗಳಂತೆ ಬದುಕಿ ಯಾಕೆಂದರೆ ಹುಲಿ ಸಿಂಹಗಳನ್ನು ಯಾವಾಗಲೂ ಬಲಿ ಕೊಡುವುದಿಲ್ಲ ಕುರಿ ಕೋಳಿಗಳನ್ನು ಬಲಿ ಕೊಡುತ್ತಾರೆ ಹೊರತು ಹುಲಿ ಸಿಂಹಗಳನ್ನಲ್ಲ, ಎಂದು ತಿಳಿಸಿದರು.

ಈಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಸುಬ್ರಮಣಿ, ಚೀಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್ ನಾಗರಾಜ್, ರೈತ ಸಂಘದ ಜಿಲ್ಲಾ ಪ್ರಧಾನಕಾರ್ಯದರ್ಶಿ ಭಕ್ತರಹಳ್ಳಿ ಪ್ರತೀಶ್, ತಾಲ್ಲೂಕು ಅಧ್ಯಕ್ಷ ಎ ಎನ್ ಮುನೇಗೌಡ, ಶಿಕ್ಷಕರಾದ ರಾಮಾಂಜಿನಪ್ಪ, ಜಿ ಎಂ ಶ್ರೀನಿವಾಸ್ ಸ್ವಾಬಿಮಾನಿ ಅಂಬೇಡ್ಕರ್ ಯುವ ಸೇನೆ ರಾಜ್ಯಪ್ರದಾನ ಕಾರ್ಯದರ್ಶಿ, ರಾಜಪ್ಪ, ದಲಿತ ಮುಖಂಡ ಚೀಮಂಗಲ ವೆಂಕಟೇಶ್ ಡಾ ಬಿ ಆರ್ ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಲಕ್ಷ್ಮೀನಾರಾಯಣ್, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ದ್ಯಾವಪ್ಪ, ಸಹ ಕಾರ್ಯದರ್ಶಿ ಯಲ್ಲಪ್ಪ, ಖಜಾಂಚಿ ಸುಬ್ರಮಣಿ ಹಾಗೂ ಪದಾಧಿಕಾರಿಗಳು ಗ್ರಾಮದ ಮುಖಂಡರು ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸನ್ಮಾನ



ವಿಜಯಪುರ: ಹೊನವಾಡ ಗ್ರಾಮಕ್ಕೆ ನೂತನವಾಗಿ ಅಧಿಕಾರ ಸ್ವೀಕರಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಆದ ಶ್ರೀ ಸುರೇಶ ಎಮ್ ಕಳ್ಳಿಮನಿ ಸರ್ ಅವರಿಗೆ ಹಾಗೂ ಹೊನವಾಡ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಈರಣ್ಣ ಬಿದರಿ ಸರ್ ಅವರಿಗೆ ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಹೆಚ್ ಡಿ ಧರೆಪ್ಪ ಹೊನವಾಡ, ಜಿಲ್ಲಾ ಗೌರವಾಧ್ಯಕ್ಷರಾದ ಶ್ರೀ ಧರೆಪ್ಪ ವಿ ಗುಗ್ಗರಿ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸತ್ತಿಗೇರಿ, ಜಿಲ್ಲಾ ಸಂಘದ ವರದಿಗಾರರಾದ ಶ್ರೀ ನಿಂಗಪ್ಪ ಮ ಕಲಘಟಗಿ,ಸರ್ವೆಯರ್ ಆದ ಶ್ರೀ ಸಾಬು ಕಾತ್ರಾಳ, ಯುವ ಮುಖಂಡರಾದ ಶ್ರೀ ಲಿಂಗರಾಜ ಪಾಟೀಲ,ಅನೀಲ ಕಾಳೆ,ಮಾಳು ಹಿರೇಗೌಡರ ಹಾಗೂ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ, ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಶಾಸಕ ಬಸನಗೌಡ ದದ್ದಾಲ್‌ರಿಂದ ಸೇತುವೆ ಕಾಮಗಾರಿ ವೀಕ್ಷಣೆ



ರಾಯಚೂರು : ಗ್ರಾಮೀಣ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳ ವೀಕ್ಷಣೆಯಲ್ಲಿ ನಿರತರಾಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದತ್ತಲ್ ರವರು ಇಂದು ಕಡ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಶಕ್ತಿನಗರದಿಂದ ಕಾಡ್ಲೂರ ಗ್ರಾ.ಪಂ ವ್ಯಾಪ್ತಿಯ ಬರುವ ಗ್ರಾಮಗಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಹೊಸದಾಗಿ ಸೇತುವೆ ನಿರ್ಮಾಣ ಕಾಮಗಾರಿ ನಡೆಸಲಾಗುತ್ತದೆ. ಈ ಕಾಮಗಾರಿಯನ್ನು ವೀಕ್ಷಣೆ ಮಾಡಲು ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶಿಲಿಸಿದರು.

ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಮಗಾರಿಯ ಬಗ್ಗೆ ಚರ್ಚಿಸಿದರು. ಪೂರ್ವ ನಿಗದಿಯಂತೆ ಇನ್ನು ಎರಡು ತಿಂಗಳಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಉತ್ತಮ ಗುಣಮಟ್ಟ ಸೇತುವೆ ನಿರ್ಮಿಸುವ ಮೂಲಕ ಸ್ಥಳೀಯರಿಗೆ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಗುತ್ತಿಗೆದಾರರಿಗೆ ಶಾಸಕರು ಆದೇಶಿಸಿದರು.

ನಿಗದಿತ ಅವಧಿಯಲ್ಲಿ ಈ ಕಾಮಗಾರಿಯನ್ನು ಗುಣಮಟ್ಟದ ಪೂರ್ಣಗೊಳಿಸಲಾಗುತ್ತದೆ ಎಂದು ಕೆಪಿಸಿ ಅಧಿಕಾರಿಗಳು ಶಾಸಕರಿಗೆ ಬರವಸೆ ನೀಡಿದರು.

ಈ ಸೇತುವೆಯಿಂದ ಈ ಭಾಗದ ಸುತ್ತಮುತ್ತಲಿನ ಜನರಿಗೆ ಗ್ರಾಮಸ್ಥರಿಗೆ ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಲಿದೆ, ಶಾಸಕರರು ಕೆಪಿಸಿ ಅಧಿಕಾರಿಗಳ ಜೊತೆಗೆ ಮಾತನಾಡಿ ಕಾಮಗಾರಿಯನ್ನು ಪ್ರಾರಂಭಿಸದ್ದಾರೆ.

ಈ ಸಂದರ್ಭದಲ್ಲಿ ಕೆ ಪಂಪಾಪತಿ, ಬಸವರಾಜ ವಕೀಲ ಶ್ರೀನಿವಾಸ್ ಗ್ಯಾಸ್, ರಾಮನಗೌಡ, ಮಹಾದೇವಪ್ಪ ಮಾಸ್ತರ, ಬಷೀರ್,ಅಶೋಕ್,ಜಿಂದಪ್ಪ, ರಮೇಶ್ ರೋಸ್ಲಿ, ಸಾಧಿಕ್, ಮಂಜುನಾಥ,ಕುನಾಲ್ ವಿರೇಶ,ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಡಿಮೆ ಮತದಾನ ಹೊಂದಿದ ಗ್ರಾಪಂಗಳಲ್ಲಿ ಮತದಾನ ಜಾಗೃತಿ



ಕೊಪ್ಪಳ : ತಾಲೂಕಿನಲ್ಲಿ ಅತಿ ಕಡಿಮೆ ಮತದಾನ ಪ್ರಮಾಣ ಹೊಂದಿದ ಗ್ರಾಪಂಗಳಾದ ಅಳವಂಡಿ ಹಾಗೂ ಹಟ್ಟಿ ಗ್ರಾಪಂ ವ್ಯಾಪ್ತಿಯಲ್ಲಿ ಮಾರ್ಚ 06ರಂದು ತಾಲೂಕು ಸ್ವೀಪ್ ಸಮಿತಿ ವತಿಯಿಂದ ಮತದಾನ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಸ್ವೀಪ್ ಸಮಿತಿಯ ಬಸವರಾಜ್ ಅವರು ಮಾತನಾಡಿ, ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ಯಾರು ಕೂಡ ಮತದಾನದಿಂದ ಹೊರಗುಳಿಯಬಾರದು. ನಿಮ್ಮ ಗ್ರಾಪಂ ವ್ಯಾಪ್ತಿಯಲ್ಲಿ ಶೇ.100 ರಷ್ಟು ಮತದಾನವಾಗಬೇಕು ಎಂದು ತಿಳಿಸಿದರು. ನಂತರ ಇವಿಎಂ ಹಾಗೂ ವಿವಿಪ್ಯಾಟ್ ಮಷಿನ್ ಕುರಿತು ಮಾಹಿತಿ ನೀಡಿ, 150 ಕ್ಕೂ ಹೆಚ್ಚು ಸಾರ್ವಜನಿಕರಿಂದ ಅಣಕು ಮತದಾನ ಮಾಡಿಸಲಾಯಿತು.

ಬಳಿಕ ಇವಿಎಂ ಹಾಗೂ ವಿವಿಪ್ಯಾಟ್ ಮಷಿನ್ಗಳ ಬಗ್ಗೆ ತಮಗೆ ಇದ್ದಂತಹ ಗೊಂದಲಗಳ ಬಗ್ಗೆ ಸಾರ್ವಜನಿಕರು ಮಾಹಿತಿ ಪಡೆದು–ಕೊಂಡರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರು, ಸ್ವೀಪ್ ಸಮಿತಿಯ ಸದಸ್ಯರು, ಗ್ರಾಪಂ ಪಿಡಿಓರವರು, ಎಂಐಎಸ್ ಸಂಯೋಜಕರು, ತಾಂತ್ರಿಕ ಸಹಾಯಕರು ಮತ್ತು ಗ್ರಾಪಂ ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಇದ್ದರು.

# ಚಿಕ್ಕೋಡಿ ನ್ಯಾಯಾಲಯ ಆವರಣದಲ್ಲಿ ಮಾ.17 ರಂದು ಮುದ್ದೆಮಾಲು ಲೀಲಾವು

ಬೆಳಗಾವಿ: ಚಿಕ್ಕೋಡಿಯ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಆವರಣದಲ್ಲಿ ಮಾರ್ಚ 17, 2023 ರಂದು ಮದ್ಯಾಹ್ನ 4 ಗಂಟೆಗೆ ವಿವಿಧ ಮುದ್ದೆಮಾಲುಗಳನ್ನು ಜಾಹೀರಲಿಲಾವು ಮಾಡಲಾಗುವುದು.

ಹಾಗೂ ಹೆಚ್ಚಿನ ಮೊತ್ತದ ಸವಾಲನ್ನು ಒಪ್ಪಿಕೊಂಡ ಸವಾಲುದಾರರು ಸವಾಲು ಹಣವನ್ನು(bid amount) ಸ್ಥಳದಲ್ಲಿಯೇ ತುಂಬಬೇಕು ಮತ್ತು ರಸೀದಿಯನ್ನು ಪಡೆದುಕೊಳ್ಳಬೇಕು. ಮುದ್ದೆಮಾಲು ವಸ್ತುವನ್ನು ಮಾರಾಟ ಮಾಡಿದ ನಂತರ ಮತ್ತೆ ಮರಳಿ ಪಡೆಯಲಾಗುವುದಿಲ್ಲ, ಹಾಗೂ ವಿನಿಮಯ ಮಾಡುವುದಿಲ್ಲ. ಹರಾಜಿನಲ್ಲಿ ಭಾಗವಹಿಸುವವರು ಆಧಾರ ಕಾರ್ಡ ಅಥವಾ ಯಾವುದಾದರೊಂದು ಗುರುತಿನ ಚಿಟಿಯನ್ನು ಕಡ್ಡಾಯವಾಗಿ ತರಬೇಕು. ಹಾಗೂ ಮಾರ್ಚ .17 ರಂದು ಬೆಳಿಗ್ಗೆ 12 ಗಂಟೆಯ ಒಳಗಾಗಿ ಶಿರೇಸ್ತೆದಾರರು, ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ.ದ.ನ್ಯಾದಂಗಳು, ಚಿಕ್ಕೋಡಿ ರವರಲ್ಲಿ ಹೆಸರು ನೊಂದಾಯಿಸಬೇಕು ಎಂದು ಚಿಕ್ಕೋಡಿಯ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ಭಾರತಿಗೆ ಬೆನ್ನು ತಟ್ಟೋಣ: ಪ್ರಾಣೇಶ್



ಗಂಗಾವತಿ: "ಗ್ರಾಮೀಣ ಭಾರತಿ ರೇಡಿಯೋ ನಮ್ಮ ಗಂಗಾವತಿಗೆ ಬಂದಿರುವುದು ನಮಗೆಲ್ಲ ಹೆಮ್ಮೆ. 90.4Fm ರೇಡಿಯೋ ಮೂಲಕ ನಮ್ಮ ಗ್ರಾಮ ಭಾರತದ ಅನಾವರಣ ಆಗಬೇಕು.ಪ್ರತಿಭೆಗಳಿಗೆ ಮುಕ್ತ ವೇದಿಕೆಯಾಗಬೇಕು. ರೇಡಿಯೋ ಒಂದು ವಿಶಿಷ್ಟ ಶ್ರವಣ ಮಾಧ್ಯಮ.ಮನುಷ್ಯನ ಅಭಿವ್ಯಕ್ತಿಯ ವಿವಿಧ ಮುಖಗಳನ್ನು ರೇಡಿಯೋ ಮುಖಾಂತರ ತೆರೆದಿಡಬೇಕು.

ರಾಘವೇಂದ್ರ ತೂ.ನ. ರವರ ಹೊಸ ಸಾಹಸವನ್ನು ನಾವೆಲ್ಲರೂ ಪ್ರೋತ್ಸಾಹಿಸಬೇಕು.ಗ್ರಾಮೀಣಭಾರತಿಗೆ ನಾವೆಲ್ಲರೂ ಹೆಗಲಿಗೆ ಹೆಗಲಾಗಿ ನಿಲ್ಲಬೇಕು." ಎಂದು ಅಂತರಾಷ್ಟ್ರೀಯ ಖ್ಯಾತಿಯ ಹಾಸ್ಯ ಚಿಂತಕರಾದ ಬೀಚಿಪ್ರಾಣೇಶ್ ಹೇಳಿದರು.

ಗಂಗಾವತಿ ತಾಲೂಕಾ ಎಂಟನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗ್ರಾಮೀಣ ಭಾರತಿಯ ಮಳಿಗೆ ಉದ್ಘಾಟಿಸಿ ಮಾತನಾಡಿದರು.

ಈ ಸಮಯದಲ್ಲಿ ಗ್ರಾಮೀಣ ಭಾರತಿ ರೇಡಿಯೋದ ಮುಖ್ಯಸ್ಥರಾದ ರಾಘವೇಂದ್ರ ತೂನರವರು ಉದ್ದೇಶಗಳನ್ನು ವಿವರಿಸಿದರು. ಈ ಸಮಯದಲ್ಲಿ ಉಪನ್ಯಾಸಕ ಗುಂಡೂರು ಪವನ್ ಕುಮಾರ್, ಕವಿ ಅಮೀರಸಾಬ ಒಂಟಿ, ಮುರಳೀಧರ ಜೋಷಿ, ಶಿಕ್ಷಕಿಯರಾದ ರೂಪ ಓ.ಎಮ್. ಮತ್ತು ವಿಜಯಾ ಇನ್ನಿತರರು ಉಪಸ್ಥಿತರಿದ್ದರು.

# 2ನೇ ದಿನದ ಅದ್ದೂರಿಯ 8ನೇ ಕನ್ನಡ ಸಾಹಿತ್ಯ ಸಮ್ಮೇಳನ



ಗಂಗಾವತಿ: ಸಮ್ಮೇಳನ ಅಧ್ಯಕ್ಷ ಸಿ.ಎಚ್. ನಾರಿನಾಳ ಅವರು ಎಡಪಂಥೀಯ ಸಂಘಟನೆಯಿಂದ ಬಂದವರು, ನಾನು ಎಬಿವಿಪಿಯಂಥ ಸಂಘಟನೆಯಿಂದ ಬಂದವನು. ನಮ್ಮಿಬ್ಬರ ಮಧ್ಯೆ ವೈಚಾರಿಕ–ಸೈದ್ಧಾಂತಿಕ ಸಂಘರ್ಷವಿದೆ. ಆದರೆ ಆ ಸಂಘರ್ಷದ ಹೊರತಾಗಿಯೂ ನಾವಿಬ್ಬರೂ ಒಂದೆ. ಪ್ರತಿ–ವಿಶ್ವಾಸ, ಬಾಂಧವ್ಯಕ್ಕೆ ಧಕ್ಕೆಯಾಗಿಲ್ಲ ಎಂದು ಹಾಸ್ಯ ಭಾಷಣಕಾರ ಬಿ. ಪ್ರಾಣೇಶ ಹೇಳಿದರು.

ನಗರದ ಸರ್ಕಾರಿ ಜೂನಿಯರ್ ಕಾಲೇಜಿನ ಮೈದಾನದಲ್ಲಿ ಸೋಮವಾರ ಆರಂಭವಾದ 8ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದ ಬಳಿಕ ಮಾತನಾಡಿದ ಪ್ರಾಣೇಶ, ನಾರಿನಾಳ ಗುರು ಗಳ ಮತ್ತು ನನ್ನ ಸಂಬಂಧ ಸಹೋರತ್ವ ಮೀರಿದ್ದು. ಹೀಗಾಗಿ ಅವರು ನಮಗೆ ಮಾರ್ಗದರ್ಶಕರು.

ಗಂಗಾವತಿಯಂತ ಸಣ ನಗರದಲ್ಲಿ ಈ ಮೊದಲು ಸಾಹಿತ್ಯ ವಾತಾವರಣ ಇರಲಿಲ್ಲ. ಸಾಹಿತ್ಯದ ಕಾರ್ಯಕ್ರಮ ಆಯೋಜಿಸಲು ಬೆಂಗಳೂರಿನಿಂದ ಜನರನ್ನು ಕರೆತರುವ ಕಾಲ ಇತ್ತು. ಆದರೆ ಈಗ ಕಾಲ ಬದಲಾಗಿದೆ. ಗಂಗಾವತಿಯಂತ ನಗರದಲ್ಲಿ ಅಮೂಲಾಗ್ರ ಬದಲಾವಣೆಯಾಗಿದ್ದು ಸಾಹಿತ್ಯದ ಪ್ರಖರ ಹೊನಲು ಹರಿಯುತ್ತಿದೆ ಎಂದರು.

ಕೆಲ ಕನ್ನಡ ಸಾಹಿತಿಗಳು ಕನ್ನಡ ಬೆಳವಣೆಗಾಗಿ ಹೋರಾಟ ಮಾಡುವವರೇ ತಮ್ಮ ಮಕ್ಕಳನ್ನು ಇಂಗ್ಲೀಷ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣ ಕೊಡಿಸುತ್ತಿರುವದು ಖೇದಕರ ಸಂಗತಿ.

ಯಾವುದೇ ಭಾಷೆಯನ್ನು ವಿರೋಧಿಸುವ ಮನೋಭಾವ ನಮ್ಮಲ್ಲಿರಬಾರದು. ಆದರೆ ನಮ್ಮ ಮಾತೃ ಭಾಷೆಯನ್ನು ಎಂದಿಗೂ ಮರೆಯಬಾರದು ಎಂದು ಬೀಚಿ ಹೇಳಿದರು.

ವೇದಿಕೆಯಲ್ಲಿ ಶಾಸಕ ಪರಣ್ಣ ಮುನವಳ್ಳಿ ಮಾತನಾಡಿ, ಕನ್ನಡ ನಾಡು ನುಡಿ, ನೆಲ, ಜಲದ ಉಳಿವಿಗಾಗಿ ಎಲ್ಲರೂ ಶ್ರಮಿಸುವುದು ಅಗತ್ಯವಿದೆ. ಕನ್ನಡ ಭಾಷೆಯ ಬಗ್ಗೆ ಅಭಿಮಾನ, ಅನ್ಯ ಭಾಷೆಗಳ ಬಗ್ಗೆ ಗೌರವ ಪ್ರೀತಿ ಹೊಂದಬೇಕು. ಇಂತಹ ಸಮ್ಮೇಳನಗಳು ಸಂಸ್ಕೃತಿ ಮತ್ತು ಸಾಹಿತ್ಯವನ್ನು ಒಂದುಗೂಡಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಶಾಸಕ ಬಸವರಾಜ್ ದಡೆಸ್ಗೂರ್ ಮಾತನಾಡಿ ಸಮ್ಮೇಳನದ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಸರಕಾರದ ಮಟ್ಟದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

ನಮಗೆ ಬದುಕಲು ಹಲವು ಭಾಷೆ ಬೇಕು ಆದರೆ ಪ್ರೀತಿಸಲು ಕನ್ನಡವೇ ಬೇಕು.ಕನ್ನಡಿಗರೆಲ್ಲರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿದಾಗ ಮಾತ್ರ ಕನ್ನಡಕ್ಕೆ ಗೌರವ ಕೊಟ್ಟಂತಾಗುತ್ತದೆ ಎಂದರು.

ಕಸಾಪದ ಜಿಲ್ಲಾ ಅಧ್ಯಕ್ಷ ಶರಣೇಗೌಡ ಪೊಲೀಸ್ ಪಾಟೀಲ್, ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ ಅಂಗಡಿ, ನಿಕಟಪೂರ್ವ ಅಧ್ಯಕ್ಷೆ ಡಾ. ಮುಮ್ತಾಜ್ ಬೇಗಂ ಇತರರು ಮಾತನಾಡಿದರು. ಸಮ್ಮೇಳನದ ಅಧ್ಯಕ್ಷ ಸಿ.ಎಚ್. ನಾರಿನಾಳ ಮಾತನಾಡಿದರು.

# ಮನೆ ಮನೆಗೆ ಗ್ಯಾರೆಂಟಿ ಕಾರ್ಡ್ ವಿತರಿಸಿದ ಶಾಸಕ ಬಸನಗೌಡ ದದ್ದಲ್



ರಾಯಚೂರು : ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಗ್ರಾಮಕ್ಕೂ, ಮನೆ ಮನೆಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಮುಟ್ಟಿಸುವ ಕಾರ್ಯಕ್ರಮವನ್ನು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ನೇತೃತ್ವದಲ್ಲಿ ಇಂದು ವಿವಿಧ ಗ್ರಾಮಗಳಲ್ಲಿ ಗ್ಯಾರಂಟಿ ಕಾರ್ಡ್ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ನಂತರ ಮಾತನಾಡಿದ ರವರು 2023 ಕ್ಕೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಸರ್ಕಾರ ರಚನೆಯಾಗಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ನ ಗ್ಯಾರಂಟಿ ಕಾರ್ಡ್ ಮೂಲಕ ಪ್ರತಿ ಕುಟುಂಬಕ್ಕೆ ಮುಖ್ಯಸ್ಥರಿಗೆ ಗೃಹ ಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು 2000 ರೂಪಾಯಿ, ಗೃಹ ಜ್ಯೋತಿ ಯೋಜನೆ ಮೂಲಕ 200 ಯೂನಿಟ್ ಉಚಿತ ವಿದ್ಯುತ್ ಮತ್ತು ಪ್ರತಿ ತಿಂಗಳು 10 ಕೆಜಿ ಉಚಿತ ಅಕ್ಕಿ ಕಾಂಗ್ರೆಸ್ ಗ್ಯಾ–ರಂಟಿ ಕಾರ್ಡ್ ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಮನೆಗೂ ಕಾರ್ಡ್ ಹಂಚುವ ಕೆಲಸ ಮಾಡಲಾಗುತ್ತಿದೆ.

ಹೀಗಾಗಲೇ ಬೂತ್‌ಮಟ್ಟದ ಮುಖಂಡರುಗಳ ಸಭೆ ಕರೆದು ಕಾಂಗ್ರೆಸ್ ಪಕ್ಷದ ಸಾಧನೆಗಳನ್ನು ಮತ್ತು ಗ್ಯಾ–ರಂಟಿ ಕಾರ್ಡ್ ನ್ನು ಪ್ರತಿಯೊಬ್ಬರಿಗೆ ತಲುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ. ಪ್ರತಿಯೊಬ್ಬ ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳು, ಕಾಂಗ್ರೆಸ್ ಪಕ್ಷದ ಮುಖಂಡರುಗಳು,ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರು ಸದಸ್ಯರು, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಗಳು, ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಗ್ಯಾರೆಂಟಿ ಕಾರ್ಡ್ ಅಭಿಯಾನ



ಬಳ್ಳಾರಿ: ನಗರದ 35ನೇ ವಾರ್ಡಿನ ಮಹಾನಗರ ಪಾಲಿಕೆಯ ಸದಸ್ಯ ವಿ.ಶ್ರೀನಿವಾಸುಲು ಮಿಂಚುರವರು ಮಂಗಳವಾರ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಅಭಿಯಾನವನ್ನು ತಮ್ಮ ವಾರ್ಡಿನ ರಾಜೇಶ್ವರಿ ನಗರದಲ್ಲಿ ಹಮ್ಮಿಕೊಂಡು ಮನೆ ಮನೆಗೆ ತೆರಳಿ ಗ್ಯಾರಂಟಿ ಕಾರ್ಡ್ ವಿತರಿಸಿದರು.

ನಂತರ ಮಾತನಾಡಿದ ಅವರು ಗೃಹಲಕ್ಷ್ಮಿ ಗೆ 2000, ಗೃಹಜ್ಯೋತಿಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ,ಗ್ಯಾಸ್ ಸಿಲಿಂಡರ್ ಗೆ 500,ಜಿಎಸ್ಟಿ ಪರಿಹಾರಕ್ಕೆ, 500,ಬೆಲೆ ಏರಿಕೆಯ ಪರಿಹಾರ ಕ್ಕೆ 1000 ನೀಡುವುದಾಗಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಅನ್ನು ಬಿಡುಗಡೆ ಮಾಡಿದೆ ಹಾಗಾಗಿ ಎಲ್ಲರೂ ಈ ಬಾರಿ ಕಾಂಗ್ರೆಸ್ ಗೆ ಮತ ನೀಡಬೇಕು ಎಂದು ಕೇಳಿಕೊಂಡರು.

ಈ ಸಂದರ್ಭದಲ್ಲಿ ವಾರ್ಡಿನ ಪ್ರಮುಖರಾದ ಮಹಮ್ಮದ್ ಗೌಸ್,ಹೊನ್ನೂರ್ ಸ್ವಾಮಿ, ವೀರೇಂದ್ರ, ಹಂಪಿಮಲ್ಲಿ, ಗಾಧಿಲಿಂಗ, ಕೊಂಡ ವೀರೇಶ್,ರಾಜೇಶ್, ಹಾಗೂ ಕಾಂಗ್ರೆಸ್ ನ್ ಕಾರ್ಯಕರ್ತರಾದ ಜಯಣ್ಣ,ಅಜಿತ್,ಶ್ಯಾಮ್,ಮುರಳಿ,ಕಿಟ್ಟಿ,ಪ್ರಕಾಶ್, ಇನ್ನು ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

# ನಾರಾ ಭರತ್‌ರೆಡ್ಡಿಗೆ ಕಾಂಗ್ರೆಸ್ ಟಿಕೆಟ್ ನೀಡಲು ಒತ್ತಾಯ



ಬಳ್ಳಾರಿ: ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದಿಂದ ಈಗಾಗಲೇ ಚಿರಪರಿಚಿತರಾಗಿರುವ ಹಾಗೂ ನಿರಂತರ ಜನಸೇವೆಯಲ್ಲಿ ತೊಡಗಿರುವ ಜ್ಯಾತ್ಯಾತೀತ ಯುವ ನಾಯಕ ನಾರಾ ಭರತ್ ರೆಡ್ಡಿ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದರೆ ಅತ್ಯಧಿಕ ಬಹುಮತದಿಂದ ಗೆಲ್ಲಲಿದ್ದಾರೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಚಾನಾಳ್ ಶೇಖರ್ ಹೇಳಿದರು.

ನಗರದ ಖಾಸಗಿ ಹೊಟೇಲ್‌ನಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕಾಂಗ್ರೆಸ್ ಪಕ್ಷದ ವತಿಯಿಂದ ಬಳ್ಳಾರಿಯ ಕೊರ್ಲಗುಂದಿ ಜಿ.ಪಂ. ಕ್ಷೇತ್ರಕ್ಕೆ ಸ್ಪರ್ಧಿಸಿ ಅತ್ಯಧಿಕ ಬಹುಮತದಿಂದ ಜಯಗಳಿಸಿ, ಜನರ ವಿಶ್ವಾಸದೊಂದಿಗೆ ಸುಮಾರು 10 ವರ್ಷಗಳ ಕಾಲ ಜನಸೇವೆಯಲ್ಲಿ, ಸ್ವ–ಂತ ಉದ್ದಿಮೆಯಿಂದ, ಟಚ್ ಫಾರ್ ಲೈಫ್ ಫೌಂಡೇಶನ್ ಸಂಸ್ಥಾಪಕರು ಸಹ ಆಗಿದ್ದು, ರಾಜಕೀಯ ಅನುಭವದೊಂದಿಗೆ ನಿರಂತರ ಜನಸೇವೆಯನ್ನು ಮಾಡುತ್ತಾ ಬಂದಿದ್ದು, ಈಗ ಬಂದಿರುವ ಬಳ್ಳಾರಿ ನಗರ ಅಭಿವೃದ್ಧಿ ದೃಷ್ಠಿಯಿಂದ ಭವಿಷ್ಯದ ಯುವ ನಾಯಕರಾಗಿರುವ, ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ನಾರಾ ಭರತ್‌ರೆಡ್ಡಿ ಅವರಿಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಟಿಕೆಟ್ ನೀಡಬೇಕೆಂದು ಬಳ್ಳಾರಿಯ ನಮ್ಮೆಲ್ಲ ವೀರಶೈವ ಲಿಂಗಾಯತ ಸಮಾಜದ ಪರವಾಗಿ ನಾವುಗಳು ಈ ಮೂಲಕ ಒತ್ತಾಯ ಮಾಡುತ್ತೇವೆ ಎಂದು ಹೇಳಿದರು.


ಈಗಾಗಲೇ ನಾರಾ ಭರತ್‌ರೆಡ್ಡಿಯವರು ಬಳ್ಳಾರಿ ನಗರವನ್ನು ಸಂಪೂರ್ಣವಾಗಿ ಖುದ್ದಾಗಿ ಒಂದು ವರ್ಷದಿಂದ ನಿರಂತರವಾಗಿ ನಗರದ ಅಭಿವೃದ್ಧಿ ದೃಷ್ಠಿಯಿಂದ ತನ್ನದೇ ಆದ ಯೋಜನೆಯನ್ನು ರೂಪಿಸಿಕೊಂಡು ಅನೇಕ ಸಾಮಾಜಿಕ ಕಾಳಜಿಯಿಂದ ಜನಪರ ಹಾಗೂ ಶೈಕ್ಷಣಿಕ, ಧಾರ್ಮಿಕ, ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯ ಮಾಡಿದ್ದಾರೆ.

6 ತಿಂಗಳುಗಳಿಂದ ಜನರ ಸಮಸ್ಯೆಗಳನ್ನು ಅರಿತು ಬಳ್ಳಾರಿ ನಗರದ ವಿಧಾನಸಭಾಕ್ಕೆ ಸ್ಪರ್ಧಿಸುವ ಮೂಲಕ ಜನಯಿರಿಂದ ನೇರವಾಗಿ ಆಯ್ಕೆಯಾಗಿ ನಗರವನ್ನು ತಮ್ಮ ಯೋಜನೆಯಂತೆ ಅಭಿವೃದ್ಧಿಪಡಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ಹೇಳಿದ ಚಾನಾಳ್ ಶೇಖರ್, ಮನೆ ಮನೆಗೂ ಭರತ್ ಎಂಬ ಕಾರ್ಯಕ್ರಮದ ಅಡಿಯಲ್ಲಿ ಸುಮಾರು 100 ದಿನಗಳು ನಾರಾ ಭರತ್‌ರೆಡ್ಡಿ ಅವರು ನಗರ ವಿಧಾನಸಭಾ ಕ್ಷೇತ್ರದಾದ್ಯಂತ ಸಂಚಾರ ಮಾಡಿ ಮನೆ ಮನೆಗೂ ತೆರಳಿ ಮತದಾರರನ್ನು, ಸಾಮಾನ್ಯ ಜನರನ್ನು ಭೇಟಿ ಮಾಡಿದ್ದು, ಅವರಿಗೆ ಉತ್ತಮವಾದ ಜನಸ್ಪಂದನೆ ಸಿಕ್ಕಿದೆ ಎಂದು ತಿಳಿಸಿದರು. ಮನೆ ಮನೆಗೂ ಭರತ್ ಅಭಿಯಾನದ ವೇಳೆ ನಗರದ ಸಮಸ್ಯೆಗಳ ಬಗ್ಗೆ ಅವರು ಜನಯಿರಿಂದ ಮಾಹಿತಿ ಪಡೆದಿದ್ದಾರೆ. ಬಳ್ಳಾರಿ ನಗರವನ್ನು ಸ್ವಚ್ಛ ಹಾಗೂ ಹಸಿರು ಮಾಡಬೇಕು, ಆಡಳಿತದಲ್ಲಿ ಭ್ರಷ್ಟಾಚಾರಕ್ಕೆ ನಿಯಂತ್ರಣ ಹೇರಬೇಕೆಂಬ ದಿಟ್ಟ ನಿರ್ಧಾರದಿಂದ ಅಭಿವೃದ್ಧಿಯನ್ನು ಬಯಸಿ ಇನ್ನೂ ಹಲವು ದೂರ ದೃಷ್ಟಿಕೊನವನ್ನು ಹೊಂದಿದ್ದಾರೆ. ಹೀಗಾಗಿ ಅವರಿಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಟಿಕೆಟ್ ನೀಡಿದಲ್ಲಿ ಗೆಲುವು ನಿಶ್ಚಿತ ಎಂಬುದು ಬಳ್ಳಾರಿ ನಗರದ ಜನತೆಯ ಅಭಿಪ್ರಾಯವಾಗಿದೆ ಎಂದರು. ನಾರಾ ಭರತ್–ರೆಡ್ಡಿ ಅವರು ಒಬ್ಬ ಉದ್ಯಮಿಯಾಗಿಯೂ ಕೂಡ ಸಾಕಷ್ಟು ಸಾಧನೆ ಮಾಡುವ ಮೂಲಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

# ಸಂತೃಪ್ತಿ ಜೀವನವೇ ನಿಜವಾದ ಸಂಪತ್ತು: ಶ್ರೀ ರಂಭಾಪುರಿ ಜಗದ್ಗುರು

ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು) : ಭೌತಿಕ ಸಂಪತ್ತು ಬರಬಹುದು ಇಲ್ಲವೇ ಹೋಗಬಹುದು. ಆದರೆ ಸ್ನೇಹ ಸಂತೃಪ್ತಿ ಸಂತೋಷವೇ ಜೀವನದ ನಿಜವಾದ ಸಂಪತ್ತು ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಭದ್ರಾ ನದಿ ತೀರದಲ್ಲಿ ಸುರಗಿ ಸಮಾರಾಧನೆ–ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಆಶೀರ್ವಚನ ನೀಡುತ್ತಿದ್ದರು.




ಹುಟ್ಟು ಸಾವು ಮನುಷ್ಯನ ಕೈಯಲ್ಲಿ ಇಲ್ಲ. ಆದರೆ ಬದುಕು ಕಟ್ಟಿಕೊಳ್ಳುವ ಶಕ್ತಿಯಿದೆ. ಪ್ರಯತ್ನದಿಂದ ಕಾರ್ಯಗಳು ಸಿದ್ಧಿಸುತ್ತವೇ ಹೊರತು ಬರಿ ಬಯಕೆಗಳಿಂದಲ್ಲ ಬೆಳೆಯ ಸುರಕ್ಷತೆಗೆ ಬೇಲಿ ಇರುವಂತೆ ಆತ್ಮೋನ್ನತಿಗಾಗಿ ಧರ್ಮಾಚರಣೆ ಅವಶ್ಯಕತೆಯಿದೆ. ಧರ್ಮ ಯಶಸ್ಸು ನೀತಿ ದಕ್ಷತೆ ಮತ್ತು ಒಳ್ಳೆಯ ಮಾತು ಯಾರಲ್ಲಿರುವವೋ ಅವರು ಎಂದೆಂದಿಗೂ ದು:ಖಿತರಾಗುವುದಿಲ್ಲ. ಕಾಲ ಕಾಲಕ್ಕೆ ಮರದ ಎಲೆಗಳು ಉದುರಿದರೂ ಮರದ ಬೇರು ಭದ್ರವಾಗಿರುವಂತೆ ಮನುಷ್ಯನ ಅಭಿಪ್ರಾಯಗಳು ಬದಲಾದರೂ ತತ್ವಸಿದ್ಧಾಂತಗಳು ಬದಲಾಗಬಾರದು. ಮನುಷ್ಯ–ಧರ್ಮಗಳ ಮಧ್ಯೆ ಸೇತುವೆ ನಿರ್ಮಿಸಬೇಕೇ ವಿನಾ ಗೋಡೆಗಳನ್ನಲ್ಲ. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರ ಧಾರೆಗಳು ಸಾಮರಸ್ಯ ಬದುಕಿಗೆ ಹೊಸ ಬೆಳಕು ಮೂಡಿಸುತ್ತವೆ.

ಈ ವರ್ಷದ ಜಾತ್ರಾ ಮಹೋತ್ಸವದ ಕಾರ್ಯಗಳು ತಮಗೆ ತೃಪ್ತಿ ತಂದಿವೆ ಎಂದರು.

ಶ್ರೀ ಪೀಠದ ಮುಂಭಾಗದಲ್ಲಿ ವಸಂತೋತ್ಸವ ನೆರವೇರಿಸಿ ಭದ್ರಾ ನದಿ ದಡದಲ್ಲಿ ಸುರಗಿ ಸಮಾರಾಧನಾ ನಿಮಿತ್ಯ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಭಕ್ತ ಸಂಕುಲಕ್ಕೆ ಶುಭ ಹಾರೈಸಿದರು. ಅಬ್ಬಿಗೇರಿ ಹಿರೇಮಠದ ಲಿಂ.ಸೋಮಶೇಖರ ಶ್ರೀಗಳ ಸ್ಮರಣಾರ್ಥವಾಗಿ ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯರು ಮತ್ತು ಅಬ್ಬಿಗೇರಿ ಗ್ರಾಮದ ಭಕ್ತರು ದಾಸೋಹ ಸೇವೆ ಸಲ್ಲಿಸಿದರು. ಹರಿಹರದ ಲಿಂ.ಕೊಂಡಜ್ಜಿ ತೋಟದಪ್ಪನವರ ಮಕ್ಕಳು ಶ್ರೀ ರಂಭಾಪುರಿ ಜಗದ್ಗುರುಗಳ ಪಾದಪೂಜೆ ನೆರವೇರಿಸಿದರು. ಭದ್ರಾ ನದಿ ತಟದಲ್ಲಿ ಸಾವಿರಾರು ಭಕ್ತರು ಮತ್ತು ಅನೇಕ ಮಠಾಧೀಶರು ಎಲ್ಲರಿಗೂ ಏಕ ಕಾಲದಲ್ಲಿ ಪ್ರಸಾದ ವಿನಿಯೋಗ ಜರುಗಿತು.

## ನಿಧನ ವಾರ್ತೆ



**ಶ್ರೀಮತಿ ಭರಮೂಲಿ ನಾಗಪ್ಪ ಕರೆನ್ನವರ**

ಬೆಳಗಾವಿ: ಶ್ರೀಮತಿ ಭರಮೂಲಿ ನಾಗಪ್ಪ ಕರೆನ್ನವರ ಇವರು ದಿ. 04 ಶನಿವಾರದಂದು ಮಚ್ಛೆ ಗ್ರಾಮದಲ್ಲಿ ತಮ್ಮ 96 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ಇವರು ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ದಿವಂಗತರು 1987 ನೆ ಅವಧಿಯಲ್ಲಿ 15 ಹಳ್ಳಿಗಳನ್ನೊಳಗೊಂಡ ಮಚ್ಛೆ ಮಂಡಳ ಪಂಚಾಯತಿ ಚುನಾವಣೆಯಲ್ಲಿ 27 ಸದಸ್ಯರಲ್ಲೇ ದಿ. ಭರಮೂಲಿ. ನಾಗಪ್ಪ. ಕರೆನ್ನವರ" ಅತೀ ಹೆಚ್ಚಿನ ಮತಗಳನ್ನು ಪಡೆದು ವಿಜಯ ಗಳಿಸಿದ್ದರು.

ಆ ವೇಳೆಯಲ್ಲಿ ಡಾ. ಜಯಸೂರ್ಯ ರೈ. ಇವರು ಮಚ್ಛೆ ಮಂಡಳ ಪಂಚಾಯ್ತಿಯ ಅಧ್ಯಕ್ಷರಾಗಿದ್ದರು.


# ಅಕ್ರಮ ಗೋವಾ ಮಧ್ಯ ವಶ



ಬೆಳಗಾವಿ: ಡಾ. ವೈ. ಮಂಜುನಾಥ, ಅಬಕಾರಿ ಅಪರ ಆಯುಕ್ತರು (ಅಪರಾಧ), ಕೇಂದ್ರಸ್ಥಾನ ಬೆಳಗಾವಿ, ಶ್ರೀ, ಪಿರೋಜ್ ಖಾನ್ ಖಿಲ್ಲೇದಾರ, ಅಬಕಾರಿ ಜಂಟಿ ಆಯುಕ್ತರು, ಬೆಳಗಾವಿ ವಿಭಾಗರವರ ಆದೇಶದಂತೆ, ಕು. ಎಂ. ವನಜಾಕ್ಷಿ, ಅಬಕಾರಿ ಉಪ ಆಯುಕ್ತರು, ಬೆಳಗಾವಿ (ದಕ್ಷಿಣ) ಜಿಲ್ಲೆ, ಶ್ರೀ, ರವಿ ಎಂ. ಮುರಗೋಡ, ಅಬಕಾರಿ ಉಪ ಅಧೀಕ್ಷಕರು, ಬೆಳಗಾವಿ ಉಪ ವಿಭಾಗರವರ ಮಾರ್ಗದರ್ಶನದಲ್ಲಿ ಮುಂಬರುವ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ 2023ರ ನಿಮಿತ್ಯ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಖಾನಾಪೂರ ವಲಯ ವ್ಯಾಪ್ತಿಯ ಜಾಂಬೋಟಿ–ಖಾನಾಪೂರ ಎಸ್.ಎಚ್–31 ರಸ್ತೆಯ ಮೋದೆಕೊಪ್ಪ ಕ್ರಾಸ್ ಹತ್ತಿರ ಖಚಿತ ಬಾತ್ಮಿಯ ಮೇರೆಗೆ ಮಧ್ಯಾಹ್ನ 2:05 ಪಿ.ಎಂ. ಗಂಟೆಗೆ ಅಬಕಾರಿ ನಿರೀಕ್ಷಕರಾದ ಶ್ರೀ, ದಾವಲಸಾಬ ಶಿಂದೋಗಿ, ಅಬಕಾರಿ ಉಪ ನಿರೀಕ್ಷಕರಾದ ಶ್ರೀ, ಜಯರಾಮ ಜಿ. ಹೆಗಡೆ ಮತ್ತು ಸಿಬ್ಬಂದಿಯವರಾದ ಶ್ರೀ, ಮಂಜುನಾಥ ಬಳಗಪ್ಪನವರ, ಶ್ರೀ, ಪ್ರಕಾಶ ಡೋಣಿರವರು ಕೂಡಿಕೊಂಡು ರಸ್ತೆಗಾವಲು ಮಾಡುವ ಸಂದರ್ಭದಲ್ಲಿ ಒಂದು ಕಂದು ಬಣ್ಣದ ಭಾರತ ಬೆಂಜ್ ಗೂಡ್ಸ ಕ್ಯಾರಿಯರ್ 12 ಚಕ್ರದ ಕಂಟೆನರ್ ವಾಹನ ಸಂಖ್ಯೆ: ಜಿಜೆ–10/ಟಿಟಿ–8276ರಲ್ಲಿ ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ 180ಎಮ್.ಎಲ್. ಅಳತೆಯ 21696 ಇಂಪಿರಿಯಲ್ ಬ್ಲ್ಯೂ ವಿಸ್ಕಿ ಬಾಟಲಿಗಳನ್ನು (ಒಟ್ಟು 3905.28 ಲೀ. ಗೋವಾ ಮದ್ಯ) ಸಾಗಾಟ ಮಾಡುತ್ತಿದ್ದಾಗ ಶ್ರೀ, ದಾವಲಸಾಬ ಶಿಂದೋಗಿ, ಅಬಕಾರಿ ನಿರೀಕ್ಷಕರು, ಖಾನಾಪೂರ ವಲಯರವರು ಜಪ್ತು ಮಾಡಿಕೊಂಡು ಒಬ್ಬ ಆರೋಪಿತನನ್ನು ವಶಕ್ಕೆ ಪಡೆದು ಗುನ್ನೆ ಸಂಖ್ಯೆ: 17/2022–23, ದಿನಾಂಕ: 07/03/2023 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲಿನ ಒಟ್ಟು ಅಂದಾಜು ಮೌಲ್ಯ ರೂ. 67,73,120/– ರಷ್ಟಿರುತ್ತದೆ.

# ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದೇವರ ಪ್ರತಿರೂಪವೇ ಡಾ. ಬಸವಲಿಂಗ ಪಟ್ಟದೇವರು

ಭಾಲ್ಕಿ: 51ನೇ ದಿನದ ಮನೆಗೊಂದು ಅನುಭವ ಮಂಟಪ ಕಾರ್ಯಕ್ರಮ ಸುಮನಬಾಯಿ ಧನರಾಜ ಕಾಕ್ನಾಳೆ ಮೀನಕೆರೆ ಮನೆ ಹತ್ತಿರ ಹಿರೇಮಠ ಗಲ್ಲಿ ಹಳೆ ಭಾಲ್ಕಿ ಅವರ ಮನೆಯಲ್ಲಿ ಜರುಗಿ–ತು. ಕಾರ್ಯಕ್ರಮದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರ ದಿವ್ಯಸಾನಿಧ್ಯದಲ್ಲಿ ಹಾಗೂ ಪೂಜ್ಯಶ್ರೀ ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನೆರವೇರಿತು. ಪೂಜ್ಯರು ಆಶೀರ್ವಚನ ನೀಡಿ–ದರು. ಕಾಕ್ನಾಳೆ ಪರಿವಾರದವರಿಂದ ಗುರು ಬಸವಪೂಜೆ ನೆರವೇರಿತು ಪ್ರಶಾಂತ ಕಾಕ್ನಾಳೆ ಸ್ವಾಗತಿಸಿದರು. ಬಸವ ಪ್ರಾರ್ಥನೆಯನ್ನು ಮಲ್ಲಮ್ಮ ನಾಗನಕೆರೆ ಹಾಗೂ ನಿರ್ಮಲಾ ತೆಂಕಾಳೆ ಭಾಲ್ಕಿ ಅವರು ನೆರವೇರಿಸಿದರು. ಶ್ರೀದೇವಿ ಶಾಂತಯ್ಯ ಸ್ವಾಮಿ ಭಕ್ತಿಗೀತೆ ಹಾಡಿದರು. ಅನುಭಾವವನ್ನು ಜೈಕಾಂತ ಗಂಗೋಜಿ ಉಪನ್ಯಾಸಕರು ಭಾಲ್ಕಿ ಪೂಜ್ಯ



ಶ್ರೀ ಡಾ. ಬಸವಲಿಂಗ ಪಟ್ಟದೇವರ ಜೀವನ ಸಾಧನೆ ಕುರಿತು ಮಾತನಾಡಿದರು. ಅನ್ನದಾಸೋಹ, ಜ್ಞಾನ ದಾಸೋಹ, ಅನುಭವ ಸೇರಿದಂತೆ ಇತರ ಉತ್ಕರ್ಷ ಮಾನವೀಯ ವಿಚಾರ ಕಾರ್ಯಗಳ ಮೂಲಕ ಸಮಾಜದ ಏಳಿಗೆಗೆ ಐದು ದಶಕಗಳಿಂದ ಶ್ರಮಿಸುತ್ತಿರುವ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದೇವರು ರಾಜ್ಯ ಸರ್ಕಾರದ 2019–20 ನೇ ಸಾಲಿನ ಬಸವ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಈಗಿನ ತೆಲಂಗಾಣದ ಮೇದಕ ಜಿಲ್ಲೆಯ ನಾರಾಯಣಖೇಡ ತಾಲೂಕಿನ ನಾಗೂರು ಗ್ರಾಮದ ಭಾಗೀರಥಿ ರಾಜಪ್ಪ ಕಾಡೋದೇ ದಂಪತಿಗಳ ಮಗನಾಗಿದ್ದ ಅವರು 25–8–1950 ರಲ್ಲಿ ಜನಿಸಿದರು. ಅವರನ್ನು ಲಿಂಗೈಕ್ಯ ಮ.ಘ.ಚ. ಡಾ. ಚನ್ನಬಸವ ಪಟ್ಟದೇವರು 1985 ಜೂನ್ ಒಂದರಂದು ಹಿರೇಮಠ ಸಂಸ್ಥಾನ ಭಾಲ್ಕಿಯ ಪಟ್ಟಾಧಿಕಾರಿಯನ್ನಾಗಿ ನೇಮಿಸಿದರು.

ಭಾಲ್ಕಿ ಪಟ್ಟಣದ ಡೊಂಬರಾಟ ಓಣಿಯ 40 ಬಡಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ತಂದೆ–ತಾಯಿಗೆ ಬೇಡವೆಂದು ತಿಪ್ಪೆಯಲ್ಲಿ ಬಿಸಾಡಿದ 100ಕ್ಕೂ ಹೆಚ್ಚು ಮಕ್ಕಳನ್ನು ರಕ್ಷಿಸಿ ಮಾತೃ ಪಿತೃ ವಾತ್ಸಲ್ಯ ನೀಡಿ ಬೆಳೆಸಿದ್ದಾರೆ.

ಅನಾಥ ಮಕ್ಕಳನ್ನು ಸುದೈವಿ ಶಿಶುಗಳು ಇದು ಕರೆದು ತಮ್ಮ ಜನ್ಮದಿನವನ್ನು ಸುದೈವಿ ಮಕ್ಕಳ ಜನ್ಮದಿನವೆಂದು ಆಚರಿಸುತ್ತಾರೆ ಪ್ರಾಣಿಹತ್ಯೆ ತಡೆದು ನೂರಕ್ಕೂ ಹೆಚ್ಚು ಗೋವುಗಳನ್ನು ಗೋಶಾಲೆಯಲ್ಲಿ ಹಾಕಿದ್ದಾರೆ.

ಶರಣರ ಮೌಲಿಕ ತತ್ವಗಳು ಎಲ್ಲೆಡೆ ಹರಡಲಿ ಎಂಬ ಸದುದ್ದೇಶದಿಂದ ಮಹಾರಾಷ್ಟ್ರ ಆಂಧ್ರಪ್ರದೇಶ ತೆಲಂಗಾಣದಲ್ಲಿ ಬಸವ ಪರಿಷತ್ತು ಆರಂಭಿಸಿ ಮರಾಠಿ ತೆಲುಗು ಹಿಂದಿ ಇಂಗ್ಲಿಷ್ ಭಾಷೆಗಳಲ್ಲಿ ವಚನ ಸಾಹಿತ್ಯವನ್ನು ರಚಿಸಿ ಮಾನವೀಯ ಧರ್ಮ ಪ್ರಸಾರ ಕಾರ್ಯದಲ್ಲಿ ತೊಡಗಿದ್ದಾರೆ.

ಈ ಕಾರ್ಯದಲ್ಲಿ ನೆರವಾಗುವ ಅನೇಕ ವ್ಯಕ್ತಿಗಳನ್ನು ಗುರುತಿಸಿ ಶ್ರೀಮಠದಿಂದ ಡಾ. ಚನ್ನಬಸವ ಪಟ್ಟದೇವರು ಪ್ರಶಸ್ತಿಯನ್ನು ಪ್ರತಿವರ್ಷ ಪ್ರಧಾನ ಮಾಡುತ್ತಿದ್ದಾರೆ. ಪೂಜ್ಯರು ಸ್ವತಹ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ, ಮೂರು ಸಂಪಾದಿಸಿದ್ದಾರೆ.

ಹಿರೇಮಠ ಸಂಸ್ಥಾನದ ವಿದ್ಯಾಪೀಠದಡಿ ಒಟ್ಟು 50 ಅಂಗಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ ಸಾವಿರ ಶಿಕ್ಷಕರು ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ. ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷರಾಗಿ ವಚನ ವಿಶ್ವವಿದ್ಯಾಲಯದ ರೂವಾರಿಗಳಾಗಿ ಹಲವು ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದಾರೆ ನಾಡಿನ ಇತರ ಮಠಾಧೀಶರಿಗೆ ಬಸವ ಅನುಯಾಯಿಗಳಿಗೆ ಮಾದರಿಯಾಗಿದ್ದಾರೆ.

# ಶಾಂತಿ ಸೌಹಾರ್ದತೆ ಸಹ ಬಾಳ್ವೆಯಿಂದ ಹೋಳಿ ಹಬ್ಬ ಆಚರಣೆ



ಬೀದರ್: ಕೊಂಗಳಿ ಗ್ರಾಮದಲ್ಲಿ ಇವತ್ತು ಸಡಗರದಿಂದ ಹೋಳಿ ಹಬ್ಬ ಆಚರಣೆ ಮಾಡಲಾಯಿತು. ಬಣ್ಣ ಬಳಿದುಕೊಂಡು ಯುವಕ, ಬೈಕ್ ಏರಿ ಅತ್ತಿಂದಿತ್ತ ಓಡಾಡುತ್ತ ರಂಗು ರಂಗಿನ ಹೋಳಿ ಚೆಲ್ಲಿದರು. ಕಾನೂನು ಸುವ್ಯವಸ್ಥೆ ಧಕ್ಕೆ ಬರದ ಹಾಗೆ ಶಾಂತಿ ಸೌಹಾರ್ದತೆ ಸಹ ಬಾಳ್ವೆಯಿಂದ ಹೋಳಿ ಹಬ್ಬವನ್ನು ಆಚರಿಸಲಾಯಿತು.

'ಪಾಲ್ಗುಣ ಮಾಸದ ಶುಕ್ಲ ಪಕ್ಷದ ಹುಣ್ಣಿಮೆಯ ದಿನದಂದು ಹೋಳಿ ಹಬ್ಬ ಆಚರಿಸುವುದು ವಾಡಿಕೆ.ಪಾಲ್ಗುಣ ಹುಣ್ಣಿಮೆಯ ಸಂದರ್ಭದಲ್ಲಿ ಗಿಡಮರಗಳು ಚಿಗುರಿನಿಂದ ಕಂಗೊಳಿಸುತ್ತಿರುತ್ತವೆ.

ಇದು ವಸಂತನ ಆಗಮನದ ಸೂಚಕವಾಗಿದೆ ಬೇಸಿಗೆಯ ಸಮಯ ರೈತರೆಲ್ಲ ತನ್ನ ಹೊಲಗದ್ದೆಗಳ ಕಾರ್ಯಗಳನ್ನು ಮುಗಿಸಿ ಮನೆಯಲ್ಲಿ ನಿರಾಳವಾಗಿ ಕಾಲ ಕಳೆಯುವ ಸಮಯ. ಗಿಡ–ಮರಗಳಲ್ಲಿ ಹಸಿರು ಸಿರಿ ಚಿಮ್ಮುವ ಸಂಭ್ರಮ.ಇಂಥ ಸಂಭ್ರಮದಲ್ಲಿ ಗಂಡಸರಿಗೆ ಬರುವ ಹಬ್ಬ ಹೋಳಿ ಕಾಮವು ಕ್ಷಣಿಕ ಪ್ರೇಮವು ಶಾಶ್ವತ,ಕಾಮವು ದೈಹಿಕ,ಪ್ರೇಮವು ಮಾನಸಿಕ, ನಮ್ಮ ಅಂತರಂಗ ಬಹಿರಂಗ ಶುದ್ಧಿಯಿಂದ ಕಾಮವನ್ನು ನಿಗ್ರಹಿಸಿ ಪ್ರೇಮವನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ ಬದುಕನ್ನು ಕಂಡುಕೊಳ್ಳುವ ಪರಿಯೇ ಕಾಮ ದಹನದ ಹೋಳಿಹಬ್ಬ.

# ಉಚಿತ ಆರೋಗ್ಯ ತಪಾಸಣಾ ಶಿಬಿರ



ರಾಯಚೂರು: ಗ್ರಾಮೀಣ ಜನರ ಆರೋಗ್ಯ ಜಾಗೃತಿಗೆ ಉಚಿತ ಆರೋಗ್ಯ ಶಿಬಿರಗಳು ಸಹಕಾರಿಯಾಗಿವೆ. ಗ್ರಾಮೀಣ ಬಡ ಜನತೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದೆ ತಜ್ಞ ವೈದ್ಯರು ಲಭ್ಯವಿದ್ದಾಗ ಶಿಬಿರದಲ್ಲಿ ಪಾಲ್ಗೊಂಡು ಉಚಿತ ಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕು.ವಿ.ವಿ.ರಾ. ಸಹಪ್ರಧ್ಯಪಕರಾದ ಡಾ. ಶರಣೆಗೌಡ ಹಿರೇಗೌಡ ಅವರು ಹೇಳಿದರು.

ರೋಟರಿ ಕ್ಲಬ್ ರಾಯಚೂರು ಮತ್ತು ಕೋರಮಂಡಲ್ ಇಂಟರ್ನ್ಯಾಷನಲ್ ಲಿಮಿಟೆಡ್ ರಾಯಚೂರು ಇವರ ಸಂಯುಕ್ತಾಶ್ರರದಲ್ಲಿ ಯಾಪಲದಿನ್ನಿ ಗ್ರಾಮದ ಕೆ. ಪಿ. ಎಸ್ ಶಾಲೆಯ ಅವರಣದಲ್ಲಿ ದಿ. 05 ರಂದು ಬೆಳಿಗ್ಗೆ 10.30 ರಂದು ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಸಾಮಾನ್ಯವಾಗಿವೆ.

ಇವು ಶ್ರೀಮಂತ ಖಾಯಿಲೆಗಳಾಗಿದ್ದು, ಬಡಜನರು ಆರ್ಥಿಕವಾಗಿ ಭರಿಸಲು ಅಸಾಧ್ಯ. ಗ್ರಾಮೀಣ ಭಾಗದ ಹಾಗೂ ನಗರ ಪ್ರದೇಶದ ಬಡ ಜನರಿಗೆ ಇಂತಹ ಉಚಿತ ಶಿಬಿರಗಳ ಮೂಲಕವೇ ಚಿಕಿತ್ಸೆಗೊಳಪಡಿಸಿದಾಗ ಮಾತ್ರ ಅವರನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯ. ನಾನು ಕೂಡ ಬಡತನ ಹಿನ್ನೆಲೆಯಿಂದ ಬಂದಿದ್ದೇನೆ. ಬಡತನದ ಪರಿಚಯವೂ ನನಗೆ ಇದ್ದು ಒಂದು ಉನ್ನತ ಸ್ಥಾನದ ಹೊಣೆ ಹೊಂದಿದ ಮೇಲೆ ಬಡ ಜನರ ಸೇವೆಯನ್ನು ಮಾಡಿ ಅವರ ಋಣವನ್ನು ಈ ರೀತಿಯ ಆರೋಗ್ಯ ಶಿಬಿರಗಳ ಮೂಲಕವೇ ತೀರಿಸಲು ಸಾಧ್ಯ ಎಂಬುದನ್ನು ಅರಿತಿದದೇನೆ ಎಂದರು.

# 2ನೇ ದಿನಕ್ಕೆ ಕಾಲಿಟ್ಟ ಹೊರಗುತ್ತಿಗೆದಾರರ ಮುಷ್ಕರ ಉಸ್ತುವಾರಿ ಸಚಿವ ಶ್ರೀರಾಮುಲು ಭೇಟಿ



ಬಳ್ಳಾರಿ: ಬಳ್ಳಾರಿ ನಗರ ಪಾಲಿಕೆಯ ನೀರು ಸರಬರಾಜು ಮತ್ತು ದುರಸ್ತಿ ಕಾರ್ಮಿಕರ ಖಾತೆಗೆ ನೇರ ಜಮಾವಣೆ ಮತ್ತು ಕೆಲಸಕ್ಕೆ ತಕ್ಕ ವೇತನಕ್ಕೆ ಒತ್ತಾಯಿಸಿ ನಗರದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಡೆಸುತ್ತಿರುವ ಮುಷ್ಕರ ಎರಡನೇ ದಿನಕ್ಕೆ ಕಾಲಿಟ್ಟಿದೆ. ಮುಷ್ಕರದ ಸ್ಥಳಕ್ಕೆ ಆಗಮಿಸಿದ ಸಮಸ್ಯೆ ಆಲಿಸಿದ ಉಸ್ತುವಾರಿ ಸಚಿವ ಬಿ ಶ್ರೀರಾಮುಲು ಭೇಟಿ ನೀಡಿ ಸಂಬಂಧಿಸಿದ ಇಲಾಖೆಯ ಸಚಿವರು ಮತ್ತು ಕಾರ್ಯದರ್ಶಿಗಳ ಜೊತೆ ಮಾತನಾಡಿ ತಮ್ಮ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಸಿ.ಪಿ.ಐ ಹಿರಿಯ ಮುಖಂಡರಾದ ಸತ್ಯಬಾಬು ಮತ್ತು ಕರ್ನಾಟಕ ಜನಸೈನ್ಯ ಸಂಘಟನೆಯ ರಾಜ್ಯಾಧ್ಯಕ್ಷ ಕೆ ರ್ರಿಸ್ವಾಮಿ ಭೇಟಿ ನೀಡಿ ಮುಸ್ಕರಕ್ಕೆ ಬೆಂಬಲ ಸೂಚಿಸಿದರು. ಈ ಸಂದರ್ಭದಲ್ಲಿ ನೀರು ಸರಬರಾಜು ನೌಕರರ ಸಂಘದ ಅಧ್ಯಕ್ಷ ಟಿ ಎಸ್ ಮಾರೆಪ್ಪ, ಅಂಜಿನಿರೆಡ್ಡಿ, ಕೆ ಗೋಪಿ, ಲಕ್ಷ್ಮಿ, ನಾಗಲಕ್ಷ್ಮಿ, ರಾಮಸ್ವಾಮಿ, ರಾಮಾಂಜಿನೇ, ಶ್ರೀನಿವಾಸುಲು, ರಂಗಪ್ಪ, ಸೋಮಲಿಂಗ ಸೇರಿದಂತೆ ಇತರರಿದ್ದರು.

# ಬಳ್ಳಾರಿ ಮಾರ್ಗವಾಗಿ ನೂತನ ಎಕ್ಸಪ್ರೆಸ್ ರೈಲು ಆರಂಭಕ್ಕೆ ಒತ್ತಾಯ: ಕೆ.ಎಂ.ಮಹೇಶ್ವರಸ್ವಾಮಿ

ಬಳ್ಳಾರಿ : ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಮಾ.13ರಂದು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿ, ಕರ್ನಾಟಕದಿಂದ ಆಯ್ಕೆಯಾದ ಸಂಸದರ ಪೈಕಿ ಇರುವ ಕೇಂದ್ರ ಸಚಿವರು ಹಾಗೂ ಇತರ ಎಲ್ಲ ಸಂಸದಯಿರಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿಯನ್ನು ಸಲ್ಲಿಸಲಾಗುವುದು ರಾಜ್ಯಾಧ್ಯಕ್ಷ ಮಹೇಶ್ವರಸ್ವಾಮಿ ತಿಳಿಸಿದರು.

ನಗರದ ಅಲ್ಲಂ ಸುಮಂಗಳಮ್ಮ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.13ರಂದು ದೆಹಲಿಗೆ ತೆರಳಿ ನಿಯೋಗದ ಮೂಲಕ ಸಂಬಂಧಿಸಿದ ಸಚಿವರು, ಸಂಸದರಿಗೆ ಮನವಿ ಪತ್ರ ನೀಡುವ ಮೂಲಕ ಜಿಲ್ಲೆಯ ಜನರ ಅನುಕೂಲಕ್ಕಾಗಿ ಖಾಯಂ ರೈಲುಗಳ ಸೇವೆ ಒದಗಿಸಬೇಕು ಹಾಗೂ ಬಳ್ಳಾರಿ ಮಾರ್ಗವಾಗಿ ನೂತನ ಎಕ್ಸ್‌ಸ್ ರೈಲುಗಳನ್ನು ಆರಂಭಿಸುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ರೈಲು ಸಂಖ್ಯೆ 06223 / 06224



ಶಿವಮೊಗ್ಗ – ಎಂ.ಜಿ.ಆರ್. ಚೆನ್ನೈ ಸೆಂಟಲ್ – ಶಿವಮೊಗ್ಗ, ರೈಲು ಸಂಖ್ಯೆ 07585 / 07586 – ಚಿಕ್ಕಜಾಜೂರು – ಗುಂತಕಲ್ ಚಿಕ್ಕಜಾಜೂರು, ರೈಲು ಸಂಖ್ಯೆ 07589 / 07590 ತಿರುಪತಿ – ಕದಿರಿದೇವನ ಪಲ್ಲಿ – ತಿರುಪತಿ, ರೈಲು ಸಂಖ್ಯೆ 07335 / 07336 – ಬೆಳಗಾವಿ – ಸಿಕಿಂದ್ರಾಬಾದ್ ಜಂಕ್ಷನ್ – ಬೆಳಗಾವಿ, ರೈಲು ಸಂಖ್ಯೆ 06243 / 06244 ಕೆ.ಎಸ್.ಆರ್. ಬೆಂಗಳೂರು– ಹೊಸಪೇಟೆ – ಕೆ.ಎಸ್.ಆರ್. ಬೆಂಗಳೂರು, ರೈಲು ಸಂಖ್ಯೆ 07657 / 07658 ತಿರುಪತಿ– ಎಸ್.ಎಸ್. ಹುಬ್ಬಳ್ಳಿ – ತಿರುಪತಿ, ರೈಲು ಸಂಖ್ಯೆ 07337 / 07338 ಗುಂತಕಲ್ – ಎಸ್.ಎಸ್.ಎಸ್ ಹುಬ್ಬಳ್ಳಿ – ಗುಂತಕಲ್ ಈ ಎಲ್ಲಾ ರೈಲುಗಳನ್ನು ಬಳ್ಳಾರಿ ಮಾರ್ಗವಾಗಿ ನೂತನವಾಗಿ ಆರಂಭಿಸಬೇಕು, ವಿಶೇಷ ರೈಲುಗಳಲ್ಲಿ ಸಂಚಯಿರಿಸುವ ಪ್ರಯಾಣಿಕರು ಅಧಿಕ ತತ್ಕಾಲ್ ದರ ನೀಡಿ ಸಂಚರಿಸುವಂತಹ ಸ್ಥಿತಿ ಇರುವ ಕಾರಣ, ಈ ಎಲ್ಲಾ ವಿಶೇಷ ರೈಲುಗಳನ್ನು ಖಾಯಂ ರೈಲುಗಳನ್ನಾಗಿ ಮಾಡಬೇಕು ಎಂದು ಮನವಿ ಸಲ್ಲಿಸುವ ಮೂಲಕ ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು. ಬಳ್ಳಾರಿ ಮಾರ್ಗದಲ್ಲಿ ಸಂಚರಿಸುವ ರೈಲುಗಳ ಸೇವೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ರೈಲು ಸಂಖ್ಯೆ: 07585 / 07586 – ಚಿಕ್ಕಜಾಜೂರು–ಗುಂತಕಲ್–ಚಿಕ್ಕಜಾಜೂರು ಎಕ್ಸ್‌ಪ್ರೆಸ್ ರೈಲನ್ನು ಚಿಕ್ಕ ಮಂಗಳೂರಿನವರೆಗೆ ವಿಸ್ತರಿಸಬೇಕು. ಈ ರೈಲನ್ನು ಚಿಕ್ಕಮಂಗಳೂರಿನವರೆಗೆ ವಿಸ್ತರಿಸಬಹುದಾಗಿದೆ. ಗುಂತಕಲ್‌ನ್ನು 2 1/2 ಗಂಟೆ ಮುಂಚಿತವಾಗಿ ಈ ರೈಲು ಆರಂಭವಾಗಬೇಕು ರಾತ್ರಿ 2 1/2 ಗಂಟೆಗೆ ತಡವಾಗಿ ಗುಂತಕಲ್ ಸೇರಬೇಕು. ಈ ರೈಲನ್ನು ಚಿಕ್ಕಮಂಗಳೂಯಿರಿಗೆ ವಿಸ್ತರಿಸಿದಲ್ಲಿ ಗುಂತಕಲ್, ಬಳ್ಳಾರಿ, ರಾಯದುರ್ಗ, ಚಿತ್ರದುರ್ಗದ ಜನತೆ ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥನ ದರ್ಶನಕ್ಕೆ ಹೋಗಲು ಚಿಕ್ಕಮಂಗಳೂರು ಹತ್ತಿರದ ರೈಲು ನಿಲ್ದಾಣವಾಗಿದೆ ಎಂದು ತಿಳಿಸಿದರು.

ರೈಲು ಸಂಖ್ಯೆ: 07335/07336 ಬೆಳಾಗಾವಿ – ಸಿಕಿಂದ್ರಾಬಾದ್ ಎಕ್ಸ್‌ಸ್ ರೈಲನ್ನು ಕೊರೋನಾ ರೋಗದ ಪೂರ್ವದಲ್ಲಿದ್ದಂತೆ "ಕೊಲ್ಲಾಪುರ– ಸಿಕಿಂದ್ರಾಬಾದ್–ಮುನೂಗುರು " ರೈಲಾಗಿ ಪರಿವರ್ತಿಸಬೇಕು. ಬೆಳಗಾಂಗೆ ಬದಲಾಗಿ ಈ ರೈಲು ಈಹಿಂದೆ ಇದ್ದಂತೆ ಕೊಲ್ಲಾಪುರದಿಂದ ಆರಂಭವಾಗಬೇಕು. ಸಿಕಿಂದ್ರಾಬಾದ್ ನಿಂದ ಈ ಹಿಂದಿನಂತೆ ಮುನೂಗುರುವರೆಗೆ ರೈಲು ಸಂಚರಿಸಬೇಕು. ರೈಲ್ವೆ ಬಜೆಟ್‌ನಲ್ಲಿ ಲೋಕಸಭೆಯಲ್ಲಿ ಅನುಮೋದನೆಗೊಂಡಿರುವ ಈ ರೈಲು ಯಥವತ್ತಾಗಿ ಕೊಲ್ಲಾಪುರ–ಬೆಳಗಾವಿ–ಸಿಕಿಂದ್ರಾಬ್– ಮುನೂಗೂರುವರೆಗೆ ಸಂಚರಿಸಬೇಕು ಎಂದು ಅವರು ತಿಳಿಸಿದರು.

ರೈಲು ಸಂಖ್ಯೆ: 11139/11140: ಸಿಹೆಚ್‌ಟಿ ಮುಂಬೈ–ಗದಗ್– ಸೂಪರ್ ಫಾಸ್ಟ್ ಎಕ್ಸ್‌ಸ್‌ನ ರೈಲಿನ ಸೇವೆಯನ್ನು ಮೈಸೂರುವರೆಗೆ ವಿಸ್ತರಿಸಬೇಕು. ಈ ರೈಲನ್ನು ಗದಗನಿಂದ ಕೊಪ್ಪಳ–ಹೊಸಪೇಟೆ– ಬಳ್ಳಾರಿ–ಚಿತ್ರದುರ್ಗ–ಅರಿಸಿಕೆರೆ–ಹಾಸನ–ಮಾರ್ಗವಾಗಿ ಮೈಸೂರಿಗೆ ತಲುಪಬೇಕು ಎಂದು ಅವರು ಒತ್ತಾಯಿಸಿದರು.

# ಗುರುವಾರ ಐನಾಪುರದಲ್ಲಿ" ವಿಜಯ ಸಂಕಲ್ಪ ಯಾತ್ರೆಯ ಬೃಹತ್ ರೋಡ್ ಶೋ" ಕಾರ್ಯಕ್ರಮ

ಮೋಳೆ : ಕಾಗವಾಡ ವಿಧಾನಸಭಾ ಮತಕ್ಷೇತ್ರದ ಐನಾಪುರ ಪಟ್ಟಣದಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ನಳಿನಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ "ವಿಜಯ ಸಂಕಲ್ಪ ಯಾತ್ರೆಯ ಬೃಹತ್ ರೋಡ್ ಶೋ" ಕಾರ್ಯಕ್ರಮವು ಗುರುವಾರ ದಿ. 9 ರಂದು ಬೆಳಗ್ಗೆ 10 ರಿಂದ 12 ಗಂಟೆಯವರೆಗೆ ಜರುಗಲಿದೆ.



ಈ "ವಿಜಯ ಸಂಕಲ್ಪ ಯಾತ್ರೆಯ ಬೃಹತ್ ರೋಡ್ ಶೋ" ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ, ಸಚಿವರಾದ ಶಶಿಕಲಾ ಜೊಲ್ಲೆ, ಸಿ.ಸಿ ಪಾಟೀಲ, ಮುರಗೇಶ ನಿರಾಣಿ, ಮಾಜಿ ಉಪಮುಖ್ಯಮಂತ್ರಿಗಳು ಹಾಗೂ ವಿಧಾನ ಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿ, ಮಾಜಿ ಸಚಿವರು ಹಾಗೂ ಗೋಕಾಕ ಶಾಸಕ ರಮೇಶ ಜಾರಕಿಹೊಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗನಕಾಯಿ, ಚಿಕ್ಕೋಡಿ ಲೋಕಸಭಾ ಸಂಸದ ಅಣ್ಣಾಸಾಹೇಬ ಜೊಲ್ಲೆ, ಅಥಣಿ ಶಾಸಕ ಮಹೇಶ ಕುಮಠಳ್ಳಿ, ಕುಡಚಿ ಶಾಸಕ ಪಿ ರಾಜೀವ, ರಾಯಬಾಗ ಶಾಸಕ ದುರ್ಯೋಧನ ಐಹೊಳೆ, ಬಿಜೆಪಿ ಚಿಕ್ಕೋಡಿ ಜಿಲ್ಲಾಧ್ಯಕ್ಷರಾದ ಡಾ. ರಾಜೇಶ್ ನೇರ್ಲೆ, ವಿಧಾನ ಪರಿಷತ್ ಸದಸ್ಯರಾದ ಹನಮಂತ ನಿರಾಣಿ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಮಹಾಂತೇಶ್ ಕವಟಗಿಮಠ, ಅರುಣ ಶಹಾಪೂರ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಾಳಿಕಾಯಿ ಸೇರಿದಂತೆ ಮತ್ತಿತರ ಗಣ್ಯರು, ಪಕ್ಷದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಕಾರಣ ಕಾಗವಾಡ ಮತಕ್ಷೇತ್ರದ ಎಲ್ಲ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕಾಗವಾಡ ಶಾಸಕ ಶ್ರೀಮಂತ ಪಾಟೀಲರು ಮನವಿ ಮಾಡಿಕೊಂಡಿದ್ದಾರೆ.

# ಘಟಪ್ರಭಾದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ 425ನೇ ಶಾಖೆ

ಭಾರತದ ಅತ್ಯಂತ ಮುಂಚೂಣಿಯ ಬ್ಯಾಂಕ್ ಎಚ್‌ಡಿಎಫ್‌ಸಿ ಬ್ಯಾಂಕ್ ರಾಜ್ಯದಲ್ಲಿ ತನ್ನ 425ನೇ ಶಾಖೆ ತೆರೆದಿದೆ. ಹೊಸ ಅರೆಪಟ್ಟಣದ ಶಾಖೆಯನು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭಾದಲ್ಲಿ ಪ್ರಾರಭಿಸಿದ್ದು ಈ ರಾಜ್ಯದಲ್ಲಿ ಈ ಮೈಲಿಗಲ್ಲು ಮುಟ್ಟಿದ ಪ್ರಮುಖ ಖಾಸಗಿ ವಲಯದ ಬ್ಯಾಂಕ್ ಎನಿಸಿದೆ. ಈ ಶಾಖೆಯನ್ನು ಎಚ್‌ಡಿಎಫ್‌ಸಿ ಬ್ಯಾಂಕ್‌ನಎಂ.ಡಿ. ಮತ್ತು ಸಿಇಒ ಸಶಿಧರ್ ಜಗದೀಶನ್ ಉದ್ಘಾಟಿಸಿದರು.

ಘಟಪ್ರಭಾ ಅದೇ ಹೆಸರಿನ ನದಿಯ ದಂಡೆ–ಯ ಮೇಲಿರುವ ಗ್ರಾಮವಾಗಿದೆ. ಘಟಪ್ರಭಾ ಅಣೆಕಟ್ಟು 1.3 ಮಿಲಿಯನ್ ಹೆಕ್ಟೇರ್‌ಗಳಷ್ಟು ಭೂಮಿಗೆ ನೀರಾವರಿ ಒದಗಿಸುತ್ತದೆ. ಇದು ತನ್ನ ತರಕಾರಿ ಬೆಳೆಗೆ ಖ್ಯಾತಿ ಪಡೆದಿದ್ದು ಅವು ರಾಜ್ಯದ ಉತ್ತರ ಭಾಗದಲ್ಲಿ ವಿತರಣೆಯಾಗುತ್ತವೆ ಮತ್ತು ಮಹಾರಾಷ್ಟ್ರ ಮತ್ತು ಗೋವಾಗಳ ಕೆಲ ನಗರಗಳಲ್ಲೂ ವಿತರಣೆಯಾಗುತ್ತವೆ.

ಇದು ಉತ್ತಮವಾದ ರೈಲು, ರಸ್ತೆ ಸಂಪರ್ಕ

HDFC BANK

We understand your world

ಹೊಂದಿದೆ ಮತ್ತು ಇದರ ಅರ್ಥವ್ಯವಸ್ಥೆಯು ಕೃಷಿ ಮತ್ತು ರೀಟೇಲ್ ವಹಿವಾಟು ಆಧರಿಸಿದೆ.

ಈ ಶಾಖೆಯ ಪ್ರಾರಂಭವು ರಾಜ್ಯದಲ್ಲಿ ಟೈಯರ್ III/IV ಪ್ರದೇಶಗಳಲ್ಲಿ ತನ್ನ ವ್ಯಾಪ್ತಿ ಹೆಚ್ಚಿಸುವ ಬ್ಯಾಂಕ್‌ನ ಯೋಜನೆಗೆ ಬದ್ಧವಾಗಿದೆ. ರಾಜ್ಯದಲ್ಲಿ ಮೂರನೇ ಒಂದರಷ್ಟು ಶಾಖೆಗಳು ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿವೆ. ಮಾರ್ಚ್ 2024ರ ಅಂತ್ಯದ ವೇಳೆಗೆ ಮತ್ತೆ 100 ಶಾಖೆಗಳನ್ನು ಸೇರ್ಪಡೆ ಮಾಡುವ ಉದ್ದೇಶ ಹೊಂದಿದ್ದೇವೆ. ಎಚ್‌ಡಿಎಫ್‌ಸಿ ಬ್ಯಾಂಕ್ ಕರ್ನಾಟಕದಲ್ಲಿ ಈ ಹಣಕಾಸು ವರ್ಷದಲ್ಲಿ 53 ಶಾಖೆಗಳನ್ನು ತೆರೆಯುವ ಮೂಲಕ ತನ್ನ ಶಾಖೆಗಳ ಜಾಲವನ್ನು ವೇಗವಾಗಿ ವಿಸ್ತರಿಸುತ್ತಿದೆ.

ಬ್ಯಾಂಕ್‌ವರ್ಷದಿಂದ ವರ್ಷದ ಆಧಾರದಲ್ಲಿ 2023ರ ಹಣಕಾಸು ವರ್ಷದ ಅಂತ್ಯಕ್ಕೆ 500ಉದ್ಯೋಗಗಳ ಸೇರ್ಪಡೆ ಮಾಡುವ ನಿರೀಕ್ಷೆ ಹೊಂದಿದೆ. ಈ ಉದ್ಘಾಟನೆಯಲ್ಲಿ ಮಾತನಾಡಿದ ಕರ್ನಾಟಕದ ರೀಟೇಲ್ ಬ್ರಾಂಚ್ ಬ್ಯಾಂಕಿಂಗ್ ಮುಖ್ಯಸ್ಥ ಅಹಮದ್ ಝುಕಾರಿಯಾ, "ಕರ್ನಾಟಕದ ಪ್ರಗತಿಯ ಕಥೆಗೆ ಕೊಡುಗೆ ನೀಡಲು ನಾವುಬಹಳ ಸಂತೋಷ ಹೊಂದಿದ್ದೇವೆ.

ರಾಜ್ಯದ ಉದ್ಯಮ ಶೀಲತೆಯ ಸ್ಫೂರ್ತಿಯು ಸದೃಢ ಸ್ಟಾರ್ಟಪ್ ಸಂಸ್ಕೃತಿ ಸೃಷ್ಟಿಸಿದೆ ಮತ್ತು ಎಂಎಸ್‌ಎಂಇ/ಕೃಷಿ ವಲಯದಲ್ಲಿ ಹಲವು ಯಶೋಗಾಥೆಗಳನ್ನು ಸೃಷ್ಟಿಸಿದೆ. ನಮ್ಮ ವಿಸ್ತರಿಸುತ್ತಿರುವ ಶಾಖೆಗಳ ಜಾಲ ಮತ್ತು ಇತರೆ ಉಪಕ್ರಮಗಳ ಮೂಲಕ ನಾವು ಕರ್ನಾಟಕದಜನರ ಏಳಿಗೆಗೆ ಕೊಡುಗೆ ನೀಡಲು ಯೋಜಿಸಿದ್ದೇವೆ" ಎಂದರು.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸದೃಢರೀಟೇಲ್ ಪೋರ್ಟ್‌ಫೋಲಿಯೊದಲ್ಲಿಚಿನ್ನದ ಸಾಲ, ಕಾರು ಸಾಲಗಳು, ದ್ವಿಚಕ್ರ ವಾಹನ ಸಾಲಗಳು, ಗ್ರಾಹಕಉತ್ಪನ್ನ ಸಾಲಗಳು, ವೈಯಕ್ತಿಕ ಸಾಲಗಳು ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿದೆ. ಬ್ಯಾಂಕ್‌ರಾಜ್ಯದಲ್ಲಿ ನೀಡಲಾಗಿರುವ ನಮ್ಮ 1,00,000 ಕೋಟಿ ರೂ.ಗಳ ಮುಂಗಡಗಳಮೂಲಕ ಪ್ರಗತಿಗೆ ಬೆಂಬಲಿಸುತ್ತಿದೆ.

# ತಳಸಮುದಾಯಗಳ ಕಲೆ ಮುನ್ನೆಲೆಗೆ ತರಬೇಕು : ಜಿಪಂ ಸಿಇಓ ಹರ್ಷಲ್ ಭೋಯರ್

ಬೆಳಗಾವಿ: "ನಶಿಸಿ ಹೋಗುತ್ತಿರುವ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಲು ಸರ್ಕಾರ ಮಹತ್ವದ ಕಾರ್ಯ ಆರಂಭಿಸಿದೆ. ನಶಿಸಿ ಹೋಗುತ್ತಿರುವ ತಳಸಮುದಾಯಗಳ ಕಲೆ, ಸಂಸ್ಕೃತಿ ಅಭಿವೃದ್ಧಿಯಾಗಬೇಕು. ಅನೇಕ ತಳ ಸಮುದಾಗಳ ಕಲೆಗಳು ಮುನ್ನಲೆಗೆ ಬರಬೇಕು ಮತ್ತು ನಮ್ಮ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಎಲ್ಲರೂ ಉಳಿಸಿ ಬೆಳೆಸಿಕೊಂಡು ಹೋಗಬೇಕು" ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಹರ್ಷಲ್ ಭೋಯರ್ ಹೇಳಿದರು.



ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕುಮಾರ ಗಂಧರ್ವ ಕಲಾಮಂದಿರದಲ್ಲಿ ಸೋಮವಾರ (ಮಾ.06) ಏರ್ಪಡಿಸಲಾಗಿದ್ದ ನಶಿಸಿ ಹೋಗುತ್ತಿರುವ ತಳ ಸಮುದಾಯಗಳನ್ನು ಮುನ್ನೆಲೆಗೆ ತರಲು ತರಬೇತಿ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತರಬೇತಿ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾದ ತಂಡಗಳಿಗೆ ಶುಭ ಕೋರಿದ ಅವರು, ಹೀಗೇ ನಮ್ಮ ಕಲೆ, ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗೋಣ. ಇಂತಹ ಇನ್ನೂ ಅನೇಕ ಗ್ರಾಮೀಣ ಕಲೆಗಳು ಬೆಳಕಿಗೆ ಬರಬೇಕು ಅವುಗಳು ನಮ್ಮ ನಾಡಿನ ಕಲೆ–ಸಂಸ್ಕೃತಿಯನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪ್ರತಿಬಿಂಬಿಸಬೇಕು ಎಂದರು.

ನಶಿಸಿ ಹೋಗುತ್ತಿರುವ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಲು ಸರ್ಕಾರ ಉತ್ತಮ ತರಬೇತಿ ನೀಡಿದೆ. ಇದರಿಂದ ಕಲಾವಿದರು ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ ಇದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕೊಂಡಾಡುವಂತಾಗಬೇಕು.

ನಮ್ಮ ಕಲೆ, ಸಂಸ್ಕೃತಿ ದೇಶಕ್ಕೆ ತಲುಪುವಂತಾಗಬೇಕು ಎಂದು ಹೇಳಿದ ತರಬೇತಿದರಾದ ಗೂಳಪ್ಪ ವಿಜಯನಗರ ಅವರು, ಇದಕ್ಕೆ ಸರಕಾರ 2 ಲಕ್ಷ ರೂ ಅನುದಾನ ಕೊಡಬೇಕು ಎಂದು ಅವರು ಹೇಳಿದರು.

ನಶಿಸಿ ಹೋಗುತ್ತಿರುವ ವಿಶಿಷ್ಟ ಕಲೆಗಳ ತರಬೇತಿಯಲ್ಲಿ 5 ತಂಡಗಳು ಭಾಗವಹಿಸಿದ್ದು, ಅವುಗಳಲ್ಲಿ ಎರಡು ತಂಡಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತವೆ.

ಭಾಗವಹಿಸಿದ ಎಲ್ಲ ತಂಡಗಳು ಉತ್ತಮ ಪ್ರದರ್ಶನ ನೀಡಿದ್ದು, ಸೋಲು–ಗೆಲುವು ಸಹಜ. ಮುಂದೆಯು ಕೂಡಾ ನಮ್ಮ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗೋಣ ಎಂದು ತರಬೇತಿ ಕಾರ್ಯಕ್ರಮದ ಜಿಲ್ಲಾ ಸಂಚಾಲಕರಾದ ಮಂಜುನಾಥ್ ಪಮ್ಮಾರ ಅವರು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕರಾದ, ಜಿನೇಶ್ವರ ಪಡನಾಡ ,ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾದ ವಿದ್ಯಾವತಿ ಭಜಂತ್ರಿ, ಕೆಂಪವ್ವ ಸೊಂಟನವರ, ವಾಸುದೇವ ರಾಠೋಡ, ಶಿವನಪ್ಪ ಚಂದರಗಿ ಮೈಲಾರಪ್ಪ ಮಾದರ ಕರೆಪ್ಪ ಜಿನ್ನವಗೋಳ ಮುಂತಾದವರು ಉಪಸ್ಥಿತರಿದ್ದರು.

# ಒಳಚರಂಡಿ ಕಾಮಗಾರಿಗೆ ಚಾಲನೆ



ಮುನವಳ್ಳಿ: ಪಟ್ಟಣದ ಮುಖ್ಯರಸ್ತೆಯ ಒಳಚರಂಡಿ ನಗರುತ್ತಾನ ಯೋಜನೆ ಅಡಿ ಕಾಮಗಾರಿಗೆ ಸೋಮವಾರ ಪೂಜ್ಯಶ್ರೀ ಮುರುಘೇಂದ್ರ ಶ್ರೀಗಳ ಸಾನಿಧ್ಯದಲ್ಲಿ ಪುರಸಭೆ ಮುಖ್ಯಾಧೀಕಾರಿ ರಮೇಶ ಹಿಟ್ಟಣಗಿ ಚಾಲನೆ ನೀಡಿದರು.

ಎಮ್.ಎಸ್.ಅಜಮನಿ, ವಾ.ಎಚ್.ಬಜೇಂತ್ರಿ, ಬಿ.ಎಸ್.ಹಲಗಿ, ಮುತ್ತು ಪಾಗದ, ಹುಸೇನ ಮುಲ್ಲಾ, ಸಾರ್ವಜನಿಕರು ಪುರಸಭೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊದಲು ನೀಡಿದವರು ಶರಣರು: ಡಾ. ಮಹೇಶ್ ಗುರನಗೌಡರ್

ಬೆಳಗಾವಿ: ಕಾರಂಜಿ ಮಠದಲ್ಲಿ 261ನೇ ಶಿವಾನುಭವ ಗೋಷ್ಠಿ ಸ್ತ್ರೀ ಸಮಾನತೆ ಹರಿಕಾರರಾದ ಶರಣ–ರು ಸಾಮಾಜಿಕಧಾರ್ಮಿಕಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನೀಡುವ ಮೂಲಕ ಸಮಾಜಕ್ಕೆ ದಿವ್ಯ ಸಂದೇಶವನ್ನು ನೀಡಿದರುಎಂದು ಪ್ರಾಧ್ಯಾಪಕಡಾ. ಮಹೇಶ್‌ಗುರನಗೌಡರ್ ಹೇಳಿದರು.



ಅವರು ಬೆಳಗಾವಿಯ ಕಾರಂಜಿ ಮಠದ 261ನೇ ಶಿವಾನುಭವ ಗೋಷ್ಠಿಯಲ್ಲಿ ಶರಣರ ವಚನಗಳಲ್ಲಿ ಸ್ತ್ರೀ ಸಂವೇದನೆ ವಿಷಯಕುರಿತು ಮಾತನಾಡಿದರು. ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಸಮಾನತೆಯನ್ನು ನೀಡಲಾಗಿತ್ತು. ತದನಂತರದಲ್ಲಿ ಹುಟ್ಟಿಕೊಂಡ ಶಾಸ್ತ್ರ ಗ್ರಂಥಗಳು ಸಾಮಾಜಿಕ ಕಟ್ಟಲೆಗಳನ್ನ ರೂಪಿಸಿ ಸ್ತ್ರೀಯರ ಹಕ್ಕುಗಳನ್ನು ಕಸಿದುಕೊಂಡರು. ಸ್ತ್ರೀ ಶೋಷಣೆಯನ್ನುಅನುಭವಿಸುವ ಂತಾಯಿತು. ಆದರೆ ಶರಣರು ಲಿಂಗ ಸಮಾನತೆಯನ್ನು ನೀಡುವುದರ ಮೂಲಕ ಸಾಮಾಜಿಕಕ್ರಾಂತಿಯನ್ನುಉಂಟು ಮಾಡಿದರು. ಹೆಣ್ಣು ಮಾಯೆಯಲ್ಲಎಂದರು. ಅವಳು ಪ್ರತ್ಯಕ್ಷದೇವತೆಎಂದು ನಿರೂಪಿಸಿದರು. ದಾಂಪತ್ಯಜೀವನಕ್ಕೆಒತ್ತು ನೀಡಿದರು. ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು. ಕಾಯಕದಲ್ಲಿಯೂಕೂಡ ಸಮಾನತೆಯನ್ನು ನೀಡಿದರು. ಛಲಬೇಕು ಶರಣಂಗೆ ಪರಸತಿಯನ್ನುಒಲ್ಲೆಂಬ ಸ್ತ್ರೀಯರ ನೋಡುವದೃಷ್ಟಿಕೋನವನ್ನು ಬದಲಾಯಿಸಿದರು. ಇಂದು ವಿಶ್ವದಲ್ಲಿ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ದಾಪುಗಾಲನ್ನು ಇಟ್ಟಿದ್ದಾಳೆ. ಸಮಾಜದ ಮುಖ್ಯ ವಾಹಿನಿಯಾಗಿದ್ದಾರೆ. ಅವಳು ವ ಾಡದೇಇರತಕ್ಕಂತಹಕ್ಷೇತ್ರವೇ ಉಳಿದಿಲ್ಲ. ಆದರೂರಾಜಕೀಯ ಹಿನ್ನಡೆಯನ್ನಅನುಭ ವಿಸುವಂಥಾಗಿದೆ. ಸಾಧನೆಯ ಶಿಖರವನ್ನು ಏರಿರುವ ಸ್ತ್ರೀ ಸುಶಿಕ್ಷಿತಳಾಗಿದ್ದಾಳೆ ಆದರೆ ಸುರಕ್ಷತೆಯನ್ನು ಪಡೆಯುವಂತೆಆಗಿಲ್ಲ. ಹಲವು ಕ್ಷೇತ್ರಗಳಲ್ಲಿ ದೌರ್ಜನ್ಯಕ್ಕೆ ಇಡಾಗುತ್ತಿದ್ದಾಳೆ. ಹಾಗಾಗದ ಹಾಗೆ ಸಮಾಜದಲ್ಲಿ ಅವಳಿಗೆ ಹೆಚ್ಚಿನಆದ್ಯತೆಯನ್ನು ನೀಡಬೇಕುಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಸಂಗೀತಗಾರ ಶ್ರೀರಂಗ ಜೋಶಿ ಅವರು ಮಾತನಾಡಿ ಪುಟ್ಟರಾಜ ಗವಾಯಿಗಳು ಈ ನಾಡುಕಂಡಅಪರೂಪದ ಸಂಗೀತ ವಿದ್ವಾಂಸರಾಗಿ ಕಲೆ ಸಂಸ್ಕೃತಿಗೆಅಪಾರವಾದಕೊಡುಗೆಯನ್ನು ನೀಡಿದ್ದಾ–ರೆಎಂದು ಸ್ಮರಿಸಿದರು. ಬೆಳಗಾವಿಯ ಸಂಸ್ಕೃತಿಕಕೇಂದ್ರವಾಗಿರುವಕಾರಂಜಿ ಮಠದ ಪೂಜ್ಯ ಗುರುಸಿದ್ಧ ಮಹಾಸ್ವಾಮೀಜಿಯವರು ಆಶೀರ್ವಚನ ನೀಡುತ್ತಾ, 19ನೇ ಶತಮಾನದಲ್ಲಿ ಹಾನಗಲ್ ಕುಮಾರಸ್ವಾಮಿಗಳು ಸಮಾಜವನ್ನುಕಟ್ಟುವ ಕೆಲಸ ಮಾಡಿದರು. ಸ್ತ್ರೀ ಸಮಾನತೆಗೆಆದ್ಯತೆ ನೀಡಿದರು. ಅವರಜೀವನವನ್ನುಅರಿತವರು ಮಾತ್ರಅವರ ಸಾಮಾಜಿಕ ವಿಚಾರಧಾರೆಗಳನ್ನು ಅರಿಯಲು ಸಾಧ್ಯ. ಇಂದು ಮಹಿಳೆಯರು ಮುಕ್ತವಾದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಅಪಾರವಾದಜ್ಞಾನವನ್ನ ಸಂಪಾದಿಸುತ್ತಿದ್ದಾರೆ. ಅವರ ಸಾಧನೆಗೆ ನಾವು ಅಭಿನಂದಿಸಲೇಬೇಕು. ವಿಶ್ವ ಮಹಿಳಾ ದಿನಾಚರಣೆಯ ಶುಭ ಸಂದ 'ರ್ಭದಲ್ಲಿಅವರಕೊಡುಗೆಜಾಗತೀಕ ಮತ್ತಷ್ಟು ವಿಸ್ತರಿಸಿ ಎಂದು ನುಡಿದರು.

ಪ್ರೊ. ಎ.ಕೆ. ಪಾಟೀಲ್ ನಿರೂಪಿಸಿದರು. ನ್ಯಾಯವಾದಿ ವಿ.ಕೆ. ಪಾಟೀಲ್ ವಂದಿಸಿದರು. ಮಾತೃ ಬಳಗದ ತಾಯಿದರು ಪ್ರಾರ್ಥನೆಯನ್ನು ಸಲ್ಲಿಸಿದರು.

ಡಾಎಫ್ ವಿ ಮಾನ್ವಿ, ವೀರಶೈವ ಮಹಾ ಘಟಕದಜಿಲ್ಲಾಅಧ್ಯಕ್ಷ ಶ್ರೀಮತಿ ರತ್ನಪ್ರಭಾ ಬೆಲ್ಲದ, ಸರಲಾ ಹೇರೇಕರ್, ಡಾ. ರಂಜನಾ ಗೋದಿ ಮೊದಲಾದವರು ಉಪಸ್ಥಿತರಿದ್ದರು.

# ವಕೀಲರ ಸಂಘಕ್ಕೆ ಅಧ್ಯಕ್ಷರಾಗಿ ಎರಡನೇ ಬಾರಿ ಆಯ್ಕೆ



ಕೊಲ್ಹಾರ: ಬಸವನ ಬಾಗೇವಾಡಿ ತಾಲೂಕಿನ ವಕೀಲರ ಸಂಘದ ಅಧ್ಯಕ್ಷ ಸ್ಥಾನಕ್ಕೆ 2023–25ನೇ ಸಾಲಿನ ಅಧ್ಯಕ್ಷ ಸ್ಥಾನಕ್ಕೆ ಮಂಗಳವಾರ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಪಟ್ಟಣದ ನ್ಯಾಯವಾದಿ ಹನುಮಂತ ಸಿದ್ರಾಮಪ್ಪ ಗುರಡ್ಡಿ 2ನೇ ಬಾರಿ ಅಧ್ಯಕ್ಷರಾಗಿ ಪುನರ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ಮೂವರು ನಾಮಪತ್ರ ಸಲ್ಲಿಸಿದರು, ಮಂಗಳವಾರ ನಿಗದಿಯಾಗಿದ್ದ ಚುನಾವಣೆಯಲ್ಲಿ ಬೆಳಗ್ಗೆ 11 ಗಂಟೆಯಿಂದ ಸಂಜೆ 4:30ರ ವರೆಗೆ ಸಂಘದ ಸದಸ್ಯರಿಂದ ಮತದಾನ ನಡೆಯಿತು.

ಒಟ್ಟು 90 ಮತದಾರರ ಪಕಿ 88 ಮತಗಳು ಚಲಾವಣೆ ಆದವು. 50 ಮತಗಳು ಹಣಮಂತ.ಸಿ.ಗುರುಡ್ಡಿ ಪಾಲಾದರೆ, 32 ಮತಗಳು ಎನ್ ಎಸ್ ಬಿರಾದಾರ, ಎ.ಕೆ ಗಂಜಹಾಳ ಇವರಿಗೆ 6 ಮತಗಳು ಚುನಾವಣೆಯಾದವು.

ಫಲಿತಾಂಶ ಘೋಷಣೆ ಆಗುತ್ತಿದ್ದಂತೆ ಹಣಮಂತ ಗುರುಡ್ಡಿ ಅವರು ಸದಸ್ಯರನ್ನು ಕೈ ಕುಲುಕಿ ಅಭಿನಂದಿಸಿದರು. ಇವರು 2014ರಲ್ಲಿ ವಕೀಲರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಎಂ ಬಿ ಚಿಮ್ಮಲದಿನ್ನಿ ಹಾಗೂ ಬಸವರಾಜ ಮಿನಜಿಗಿ ಚುನಾವಣೆ ಪ್ರಕ್ರಿಯೆಯಲ್ಲಿ ಸೇವೆ ಸಲ್ಲಿಸಿದರು.

ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ : ವಕೀಲರ ಸಂಘದ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಶಿ ಬಿದರ ಕುಂದಿ , ಕಾರ್ಯದರ್ಶಿ:ಆಗಿ ರವಿ ಎಂ ರಾಠೋಡ, ಸಹ ಕಾರ್ಯದರ್ಶಿ :ಆಗಿ ಈರಣ್ಣ ಎನ್ ಹಂಗರಗಿ,

ಗ್ರಂಥಪಾಲಕರಾಗಿ : ಗೋವಿಂದ ಬಾಬು ಪವಾರ ನೇಮಕ ಮಾಡಲಾಯಿತು.

ಕಾರ್ಯಕಾರಿಣಿ ಮಂಡಲ ಸದಸ್ಯರಾಗಿ ಗ್ಯಾನಪ್ಪ ನಿಜಪ್ಪ ಬೇವಿನಮರದ( ಸಿದ್ದನಾಥ), ಸುನೀಲ ದೇಸು ರಾಠೋಡ, ಬೇಬಿ ಭಾಸು ಚವ್ಹಾಣ, ಹಾಗೂ ಸಮೀರ್ ರಾಜೆಸಾಬ ಕೋರಬು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಯೋಗಿ ನಾರಾಯಣ ಕೈವಾರ ತಾತಯ್ಯನವರ ಜಯಂತಿ ಆಚರಣೆ



ಬಳ್ಳಾರಿ: ಬಳ್ಳಾರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಬಿಡಿಎಎ ಫುಟ್‌ಬಾಲ್ ಮೈದಾನದ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 297ನೇ ಯೋಗಿ ನಾರಾಯಣ ಕೈವಾರ ತಾತಯ್ಯನವರ ಜಯಂತಿಯು ಸಂಭ್ರಮದಿಂದ ನಡೆಯಿತು. ಬಳ್ಳಾರಿ ನಗರ ಶಾಸಕ ಜಿ.ಸೋಮಶೇಖರ ರೆಡ್ಡಿ ಅವರು ಯೋಗಿ ನಾರಾಯಣ ಕೈವಾರ ತಾತಯ್ಯನವರ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಿ ಜಯಂತಿಯ ಶುಭಾಷಯ ತಿಳಿಸಿದರು.

ಕರ್ನಾಟಕ ಪ್ರದೇಶ ಬಲಿಜ ಸಂಘದ ನಿರ್ದೇಶಕ ಕಾಂಡ್ರಾ ಸತೀಶ್ ಕುಮಾರ್ ಅವರು ಜಯಂತಿಯ ಕುರಿತು ವಿಶೇಷ ಉಪನ್ಯಾಸ ನೀಡಿದರು.ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಗೆ ಬಳ್ಳಾರಿ ನಗರ ಶಾಸಕರಾದ ಜಿ.ಸೋಮಶೇಖರರೆಡ್ಡಿ ಅವರು ಚಾಲನೆ ನೀಡಿದರು.

ಮೆರವಣಿಗೆಯು ಬಲಿಜ ಭವನದಿಂದ ಆರಂಭವಾಗಿ ಬಿಡಿಎಎ ಫುಟ್‌ಬಾಲ್ ಮೈದಾನದ ಸಭಾಂಗಣದವರೆಗೆ ತಲುಪಿತು.ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸುರೇಶ್ ಬಾಬು, ಸಮಾಜದ ಹಿರಿಯ ಮುಖಂಡರುಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಚಿಕ್ಕೋಡಿ ನಗರದ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ರಯತ್ನ: ಗಣೇಶ ಹುಕ್ಕೇರಿ

ಚಿಕ್ಕೋಡಿ: ಜಿಲ್ಲಾ ಸ್ಥಾನಮಾನ ಹೊಂದಿರುವ ಚಿಕ್ಕೋಡಿ ನಗರದ ಅಭಿವೃದ್ಧಿಗೆ ವಿಶೇಷ ಕಾಳಜಿ ಹೊಂದಿದ್ದು, ನಗರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಲಾಗಿದೆ ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ಚಿಕ್ಕೋಡಿ ಇಂದಿರಾ ನಗರದ ವಾರ್ಡ ನಂಬರ 14 ಮತ್ತು 15 ರಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ಬಿಸಿ ನೀರು ಘಟಕ ಮತ್ತು ಹೈ ಮಾಸ್ಟ ವಿದ್ಯುತ್ ದೀಪಗಳ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ತಂದೆಯವರಾದ ಪ್ರಕಾಶ ಹುಕ್ಕೇರಿ ಅವರು ಸಚಿವರು ಮತ್ತು ಸಂಸದರಾಗಿದ್ದ ವೇಳೆಯಲ್ಲಿ ಚಿಕ್ಕೋಡಿ ಅಭಿವೃದ್ಧಿಗೆ ಸಾಕಷ್ಟು ಅನುದಾನ ಖರ್ಚು ಮಾಡಿದ್ದಾರೆ. ಚಿಕ್ಕೋಡಿ ನಗರಕ್ಕೆ ಬೇಕಾಗಿರುವ ದಿನನಿತ್ಯ ಕುಡಿಯುವ ನೀರಿನ ಯೋಜನೆ, ಚರಂಡಿ ನಿರ್ಮಾಣ, ಹೈಟೆಕ ಬಸ್ ನಿಲ್ದಾಣ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿ ಜನರಿಗೆ ಅನುಕೂಲ ಕಲ್ಪಿಸಲಾಗಿದೆ ಎಂದರು.



ಚಿಕ್ಕೋಡಿ ನಗರದ ವಾರ್ಡ ನಂಬರ 14 ಮತ್ತು 15ರಲ್ಲಿ ಬರುವ ಇಂದಿರಾನಗರ, ಎಸ್‌ಬಿಐ ಕಾಲೋನಿಯಲ್ಲಿ ಪುರಸಭೆ ಸದಸ್ಯರಾದ ಸಾಭೀರ ಜಮಾದಾರ ಮತ್ತು ನ್ಯಾಯವಾದಿ ಮುದ್ದಸರ ಜಮಾದಾರ ಇಬ್ಬರು ಸಹೋಧರರು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಜನರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದ್ದಾರೆ. ಇಂದಿರಾ ನಗರದಲ್ಲಿ ಎರಡು ಕಡೆ ಬಿಸಿ ನೀರಿನ ಘಟಕ ಸ್ಥಾಪಿಸಿ ಕಡು ಬಡವರಿಗೆ ಅನುಕೂಲ ಕಲ್ಪಿಸಿರುವ ಕಾರ್ಯ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ರಾಮಾ ಮಾನೆ, ಗುಲಾಬ ಬಾಗವಾನ, ಮಾಜಿ ಸದಸ್ಯ ಪ್ರಭಾಕರ ಕೋರೆ, ಅನೀಲ ಮಾನೆ, ನ್ಯಾಯವಾದಿ ಮುದ್ದಸರ ಜಮಾದಾರ, ಇರ್ಫಾನ ಬೇಪಾರಿ, ವಿನೋಧ ಮಾಳಗೆ, ರವಿ ದರ್ಜೆ, ಸುಧೀರ ಮಾಯಪ್ಪಗೊಳ, ಇರ್ಫಾನ ಕಲೇಗಾರ, ಪೀರೋಜ ಕಲಾವಂತ, ಬಾಬು ಸಮ್ಮತ್ತಶೆಟ್ಟಿ ಮುಂತಾದವರು ಇದ್ದರು.

# ಚಿಮ್ಮಡ: ಹಲವಾರು ವರ್ಷದಿಂದ ಬಣ್ಣ ವಿಲ್ಲದೆ ಹೋಳಿ ಹಬ್ಬ ಆಚರಣೆ

ಚಿಮ್ಮಡ : ಗ್ರಾಮದಲ್ಲಿ ಅತ್ಯಂತ ಸಂಭ್ರಮದಿಂದ ಮಂಗಳವಾರ ಹೋಳಿ ಹುಣ್ಣಿಮೆ ನಿಮಿತ್ಯವಾಗಿ ಗ್ರಾಮ ಚಾವಡಿ ಹತ್ತಿರ ಇರುವ ಕಾಮ–ರತಿಯರ ಮೊರ್ತಿಗಳನ್ನು ಅಲಂಕೃತ ಮಂಟಪದಲ್ಲಿ ಕೂಡಿಸಿ ಮಂಟಪವನ್ನು ವಿದ್ಯುತ್ ಅಲಂಕಾರಗಳಿಂದ ಶೃಂಗರಿಸಲಾಗಿದ ಕಾಮ ರತಿಗೆ ದರ್ಶನಕೆ ಮಕ್ಕಳಿಂದ ಹಿಡಿದು ಎಲ್ಲರೊ ಹಲಗೆಗಳನ್ನು ಬಾರಿಸತ್ತಾ ಬೊಬ್ಬೆಹಾಕುತ್ತಿದ್ದರು ಬುಧವಾರ ನಸುಕೀನ ಹೊತ್ತಿಗೆ ಕಾಮದಹನ ನಡೆಸಿ, ಕಾಮನ ಬೆಂಕಿ ಹಚ್ಚಿ ಮನೆಗೆ ಕಾಮನ ಬೆಂಕಿ ಒಯದು ಮನೆಗಳಲ್ಲಿ ಅಡುಗೆ ತಯಾರಿಸುವದು ಹಿಂದಿನಿಂದಲೂ ನಡೆದುಕೊಂಡು ಬಂದಿದ್ದ ಪದತ್ತಿ ಇದೆ.



ರಾಜ್ಯದಲ್ಲಿಯೇ ಕೆಲವು ಜಿಲ್ಲೆಯಲ್ಲಿ ನಡೆಯುವ ಬಣ್ಣದ ಹಬ್ಬವನ್ನು ತನ್ನದೆಆದ ವಿಶಿಷ್ಟತೆ ಪಡೆದುಕೂಂಡಿದೆ. ಹಬ್ಬದ ನಿಮಿತ್ಯವಾಗಿ ಐದು ದಿನ ಬಣ್ಣಗಳಲ್ಲೇ ಜನತೇ ಮುಳುಗಿಹೋಗುತ್ತಾರೆ. ಆದರೆ ಬಾಗಲಕೋಟ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ಚಿಮ್ಮಡ ಗ್ರಾಮದಲ್ಲಿ ಮಾತ್ರ ಬಣ್ಣವಿಲ್ಲದೆ ಗೀ. ಗೀ. ಪದ ಜಾನಪದ ಗೀತೆಗಳನ್ನು ಹಾಡುತ್ತಾ ಸಂಭ್ರಮಿಸಿತ್ತಾರೆ.

ಘಟನೆ ಹಿನ್ನಲೆ: ಗ್ರಾಮದಲ್ಲಿ ಹೂಳಿ ಹಬ್ಬ ಆಚರಣೆ ಸಂದರ್ಬದಲ್ಲಿ ನಡೆದ ಅಹಿತಕರ ಘಟನೆಯಂದರೆ. 30 ವರ್ಷಗಳಿಂದ ಹಿಂದೆ ಬಸಗಳಿಗೆ ಮತ್ತು ಇತರೆ ವಾಹನಗಳಿಗೆ ಕೀಡಿಗೆಡಿಗಳು ಜಖಂ ಗೂಳಿಸದರು. ಬೇಸತ್ತ ಗ್ರಾಮದ ಹಿರಿಯರು ಮತ್ತು ಗ್ರಾಮಸ್ಥರು ಸೇರಿ ಇನ್ನು ಮುಂದೆ ಬಣ್ಣವನ್ನೇ ನಿಷೇದಿಸೋಣ ಎಂಬ ಧೃಢ ನಿರ್ಧಾರಕ್ಕೆ ಬಂದರು ಅಂದಿನಿಂದ ಇಂದಿನಿನವರಗೂ ಈ ಚಿಮ್ಮಡ ಗ್ರಾಮದಲ್ಲಿ ಬಣ್ಣ ಅಂದರೆ ಮಾರೂ ದೂರ. ಕಬ್ಬು ಕಡಿಯುವ ಗ್ಯಾಂಗಿನವರು. ಮತ್ತು ವಿವಿದ ತರಹದ ತಂಡಗಳು ಮತ್ತು 15–20 ಜನರ ತಂಡ ಒಂದೇ ವಿನ್ಯಾಸದ ತರಹದ ಬಣ್ಣದ ಹೂಸ ಬಟ್ಟೆ ಹಾಕಿಕೂಂಡು ಹಬ್ಬವನ್ನು ಆಚರಣೆ ಮಾಡುವ ವಿಶಿಷ್ಟ ಸಂಪ್ರದಾಯ ಇಲ್ಲಿದೆ. ಮಹಾಲಿಂಗಪೂರ ಮತ್ತು ರಬಕವಿ ಬನಹಟ್ಟಿಯ ಮತ್ತು ನೆರೆ–ಯ ಜಿಲ್ಲೆಯ ವಿಜಯಪುರ ಹಾಗೂ ಬೆಳಗಾವಂವಿ ಸೇರಿ ಇನಿಂತರ ಪಟ್ಟಣ ಮತ್ತು ಗ್ರಾಮಿಣ ಪ್ರದೇಶದವರು ಚಿಮ್ಮಡ ಗ್ರಾಮಕ್ಕೆ ಆಗಮಿಸುವವರು. ವಿಶೇಷವಾಗಿದೆ.

## ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರ ಹಿತರಕ್ಷಣಾ ಹಾಘೂ ಸಂರಕ್ಷಣಾ ಸಭೆ

ಚಿಕ್ಕೋಡಿ: ಇಲ್ಲಿನ ಐಎಂಎ ಸಭಾ ಭವನದಲ್ಲಿ ದಿ.10 ರಂದು ತಾಲೂಕಾ ಮಟ್ಟದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರ ಹಿತರಕ್ಷಣಾ ಹಾಘೂ ಸಂರಕ್ಷಣಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ ಸಿ.ಎಸ್.ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದರು.

ನಗರದ ಭಾತೆ ಆಸ್ಪತ್ರೆ ಪಕ್ಕದಲ್ಲಿ ಇರುವ ಐಎಂಎ ಸಭಾ ಭವನದಲ್ಲಿ ಮಾರ್ಚ 10 ರಂದು ತಾಲೂಕಾ ಮಟ್ಟದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರ ಹಿತರಕ್ಷಣಾ ಹಾಘೂ ಸಂರಕ್ಷಣಾ ಸಭೆ ಕರೆಯಲಾಗಿದೆ. ಎಲ್ಲ ತಾಲೂಕಾ ಮಟ್ಟದ ಅಧಿಕಾರಿಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸದೆ ತಾವೆ ಖುದ್ದಾಗಿ ಸಭೆಗೆ ಹಾಜರಾಗಬೇಕು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮುಖಂಡರು ಸಭೆಗೆ ಹಾಜರಾಗಿ ಸಲಹೆ ಸೂಚನೆ ನೀಡಬೇಕು ಎಂದು ತಹಶೀಲ್ದಾರರು ತಿಳಿಸಿದ್ದಾರೆ.

## ಮಯೂರಿ ಘಾಟಗೆ ಸಾಧನೆ



ಕಾಗವಾಡ: ಕಾಗವಾಡದ ಶಿವಾನಂದ ಮಹಾವಿದ್ಯಾಲಯ ವಿದ್ಯಾರ್ಥಿನಿ ಕುಮಾರಿ ಮಯೂರಿ ಘಾಟಗೆ ಇವಳು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಬೆಳಗಾವಿಯ 2021–22ನೇ ಸಾಲಿನ ಪದವಿ ಪರೀಕ್ಷೆಯಲ್ಲಿ ಹಮ್ಮಿಕೊಂಡಿರುವ ವಾಣಿಜ್ಯ ಪದವಿ ಪರೀಕ್ಷೆಯಲ್ಲಿ ಶೇ.95.65% ಅಂಕಗಳನ್ನುಗಳಿಸಿ ವಿಶ್ವವಿದ್ಯಾಲಯಕ್ಕೆ 7 ರ‍್ಯಾಂಕ್‌ನ್ನು ಪಡೆದುಕೊಂಡು ಸಾಧನೆ ಮಾಡಿ ಮಹಾವಿದ್ಯಲಯದ ಕೀರ್ತಿಯನ್ನು ಹೆಚ್ಚಿಸಿದ್ದಾಳೆ.

ವಿದ್ಯಾರ್ಥಿನಿಗೆ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಪ್ರೊ. ವ್ಹಿ.ಬಿ.ಬುರ್ಲೆ, ಪ್ರೊ. ಎಸ್.ಎಂ.ಘೋರ್ಪಡೆ, ಪ್ರೊ. ವ್ಹಿ.ವ್ಹಿ.ಪಾಟೀಲ, ಪ್ರೊ. ಪಿ.ವ್ಹಿ.ಕಿನಂಗೆ ಮತ್ತು ಪ್ರೊ. ಎ.ಎ.ಪಾಟೀಲ ಬೋಧಿಸಿದ್ದರು. ಇವಳ ಸಾಧನೆಗೆ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಪ್ರೊ. ಬಿ.ಎ.ಪಾಟೀಲ, ಪ್ರಾಚಾರ್ಯರಾದ ಪ್ರೊ. ವ್ಹಿ.ಎಸ್.ತುಗಶೆಟ್ಟಿ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು, ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಬೇಸಿಗೆ ಕಾಲದಲ್ಲಿ ಬಣ್ಣಗಳೊಂದಿಗೆ ತಂಪೆರೆಯುವ ಹೋಳಿ ಹಬ್ಬಕ್ಕೆ ವಿಶಿಷ್ಟ ಸ್ಥಾನ

ಬೆಳಗಾವಿ: "ನಮ್ಮದೇಶದಲ್ಲಿ ಜನಪದರು ತಮ್ಮ ನಿತ್ಯ ಬದುಕಿನ ಜಂಜಾಟಗಳ ನಡುವೆ ತಮ್ಮ ಬಿಡುವಿನ ವೇಳೆಯಲ್ಲಿ ಜನರೊಡನೆ ಸೇರಿ ಸಂಭ್ರಮಿಸಲು ವಿವಿಧ ಹಬ್ಬಗಳನ್ನು ಆಚರಣೆಗೆತಂದಿದ್ದಾರೆ. ಅಂಥ ಹಬ್ಬಗಳಲ್ಲಿ ಬೇಸಿಗೆ ಕಾಲದಲ್ಲಿ ಬಣ್ಣಗಳೊಂದಿಗೆ ತಂಪೆರೆಯುವ ಹೋಳಿ ಹಬ್ಬ ವಿಶಿಷ್ಟ ಸ್ಥಾನ ಪಡೆದಿದೆ. ಆಧುನಿಕತೆಯ ಭರದಲ್ಲಿ ನಮ್ಮ ಹಬ್ಬಗಳನ್ನು ಉಳಿಸಿ ಬೆಳೆಸಲು ನಮ್ಮ ಫೌಂಡೇಶನ್ನಾ ವತಿಯಿಂದ ರಂಗಪಚಮಿ ಉತ್ಸವವನ್ನು ಸಾರ್ವಜನಿಕವಾಗಿ ಆಚರಿಸುವ ಮೂಲಕ ಎಲ್ಲ ಸಮುದಾಯದ ಜನರು ಒಂದೆಡೆ ಬೇರೆಯಬೇಕು, ಸಂಭ್ರಮಿಸಿ ಸಹೋದರತ್ವ ಮೆರೆಯಬೇಕು" ಎಂದು ಸುರೇಶಯಾದವ ಫೌಂಡೇಶನ್ ಹಾಗೂ ಆಟೋನಗರ ಇಂಡಸ್ಟ್ರಿಯಲ್ ಏರಿಯಾಅ–ಧ್ಯಕ್ಷ, ಸಮಾಜ ಸೇವಕ ಸುರೇಶಯಾದವ ಅಭಿಪ್ರಾಯ ಪಟ್ಟರು.



ಬೆಳಗಾವಿಯ ರಾಮತೀರ್ಥ ನಗರದಕಣಬರಗಿಕೆರೆ ಪಕ್ಕದ ಹನುಮಾನ ಮಂದಿರದಲ್ಲಿ ಪಕ್ಕದಲ್ಲಿ ಸುರೇಶಯಾದವ ಫೌಂಡೇಶನ್ ಹಾಗೂ ರಾಮತೀರ್ಥ ನಗರ ರಹವಾಸಿಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ 'ರಂಗ ಪಂಚಮಿ–2023' ಉದ್ಘಾಟಿಸಿ ಮಾತನಾಡಿದಅವರು, " ಇತ್ತೀಚಿಗೆ ಹಬ್ಬಗಳ ಹೆಸರಿನಲ್ಲಿ ಪರಿಸರಕ್ಕೆ ಹಾನಿಯಾಗುವ ರೀತಿಯಲ್ಲಿ ಆಚರಿಸಲಾಗುತ್ತಿದೆ.

ಹೀಗಾಗಿ ಈ ಸಂದರ್ಭದಲಿ ಆ–ರೋಗ್ಯಕ್ಕೆ ಹಾನಿ ಮಾಡದ ಪರಿಸರ ಸ್ನೇಹಿ ಬಣ್ಣ ಬಳಸುತ್ತಿದ್ದೇವೆ ಹಾಗೂ ಕಾಮ ದಹನಕ್ಕಾಗಿ ಗಿಡಮರಗಳ ಬದಲಾಗಿ ಬೆರಣಿ ಬಳಸುತ್ತಿದ್ದೇವೆ" ಎಂದು ಹೇಳಿದರು.

ಕಾರ್ಯಕ್ರಮ ಯಶಸ್ವಿಯಾಗುವಲ್ಲಿಏಒಆಅ ಮಾಜಿಅಧ್ಯಕ್ಷರಾದ ಶ್ರೀ ಮುಕ್ತರ್ ಪಠಾಣ ನಾನಾಗೌಡ ಬಿರಾದಾರ, ಅಶೋಕಧರಿ ಗೌಡರ ತೋರಗಲ್, ಅಪ್ಪಯ್ಯಾಕೋಲಕಾರ, ಪೂರ್ಣಿಮಾಯಾದವ, ಛಾಯಾ ಬೆಳ್ಳಿ, ಆನಂದಕುಮಾರ, ಆನಂದಕೋಲಕಾರ, ಸಂಕೇಶ್ವರಿ,

ಸಂತೋಷ ಮೇರಾಕರ, ರಾಜಶೇಖರ ಶಿಂದ್ರೆ, ಶ್ರೀಮಂತ ಗುತ್ತಿ, ಮಾರುತಿ ಭಾಸ್ಕರ, ನಿಂಗಪ್ಪ ಕರೆಪ್ಪಗೋಳ, ಅಭಿಷೇಕ, ನಿರ್ವಾಣಿ ಬೆಣ್ಣಿ, ಶಂಕರ ಜಿಂಡ್ರಾಳ, ಸ್ನೇಹಲ್ ಬೆಳ್ಳಿ, ಮಹಾದೇವಟೊಣ್ಣೆ, ನಾನಾಗೌಡ ಬಿರಾದಾರ, ರೂಪಾ ಪಾಟೀಲ, ಬಾಳಪ್ಪ ಹಂಜಿ,ಪವನ ಗುಣಕಿ, ಬಸಪ್ಪ ಮುಗಳಿಹಾಳ, ಕಿರಣ ಹವಳ, ನಿರಂಜನ ಪಾಟೀಲ, ಮಲ್ಹಾರ ದೀಕ್ಷಿತ, ಸ್ನೇಹಲ್ ಬೆಳ್ಳಿ, ವೀರನಗೌಡ ಪಾಟೀಲ ಮುಂತಾದವರು ಶ್ರಮಿಸಿದರು.

ಕಾರ್ಯಕ್ರಮದಲ್ಲಿ ಬಣ್ಣದಾಟಆಡಲು ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಸ್ಪ್ರಿಂಕಲ್ ವ್ಯವಸ್ಥೆ ಕಲ್ಪಿಸಿದ್ದರಿಂದ ಪುರುಷರು, ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಸಾವಿರಾರು ಸಂಖ್ಯೆಯಲ್ಲಿಉತ್ಸವದಲ್ಲಿ ಹುಮ್ಮಸ್ಸಿನಿಂದ ಪಾಲ್ಗೊಂಡು ಸಂಭ್ರಮಿಸಿ ಆಯೋಜಿಸಿದ ಸುರೇಶಯಾದವ 'ಅವರನ್ನು ಅಭಿನಂದಿಸಿದರು.

BELAGAVI VARADI KANNADA DAILY MORNING : Editor, Printer, Publisher & Owned By : Satish Basavani Gudagenatti, Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089